ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 35 | ಆಗಸ್ಟ್ 30, 1981 | ಬೆಲೆ : 60 ಪೈಸೆ

ಕಾಂಗ್ರೆಸ್ಸಿನ ಭವಿಷ್ಯ

ಅರಸ್ ಕಾಂಗ್ರೆಸ್ಸೆಂದು ಇದ್ದ ಕಾಂಗ್ರೆಸ್ ಸಂಸ್ಥೆಯ ಹೆಸರು ಈಗ ಬದಲಾವಣೆ ಆಗಿ ಕಾಂಗ್ರೆಸ್ (ಎಸ್) ಎಂದು ಸದ್ಯ ನಾಮಾಂಕಿತಗೊಂಡಿದೆ. ಈ ಪಕ್ಷಕ್ಕೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಎಂಬ ಹೆಸರಿಡಲು ಹಕ್ಕಿಲ್ಲವೆಂಬುದಾಗಿ ಚುನಾವಣಾ ಆಯೋಗವು ತೀರ್ಪಿತ್ತ ನಂತರ ಈ ಪಕ್ಷದ ಭವಿಷ್ಯದ ಬಗ್ಗೆ ಹಲವರಲ್ಲಿ ಗೊಂದಲವುಂಟಾಗಿ ಅನೇಕ ನಾಯಕರೂ, ಸದಸ್ಯರೂ ಈ ಪಕ್ಷವನ್ನು ತ್ಯಜಿಸಿ ಕಾಂಗ್ರೈಗೆ ಸೇರಿದರು. ಈ ಪಕ್ಷದ ಹೆಸರನ್ನು ಬದಲಾಯಿಸಬೇಕೆಂದೂ, ಬೇರೆ ಚುನಾವಣಾ ಚಿಹ್ನೆಯನ್ನು ಆರಿಸಬೇಕೆಂದೂ ಚುನಾವಣಾ ಆಯೋಗದ ತೀರ್ಪು ಬಂದ ಮೇಲೆ ಈ ಪಕ್ಷದ ಭವಿಷ್ಯವೇನೆಂದು ಪತ್ರಿಕೆಗಳಲ್ಲಿ ಚರ್ಚೆ ನಡೆದಿತ್ತು.

ನಿಜವಾಗಿ ಹೇಳಬೇಕಾದರೆ ಕಾಂಗ್ರೆಸ್ ಪದ ಪ್ರಯೋಗಮಾಡಲು ಯಾರಿಗೂ ಹಕ್ಕಿಲ್ಲ. ದೇಶದ ಸ್ವಾತಂತ್ರ್ಯಕ್ಕೋಸ್ಕರ, ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ನಡೆಸಿದ ಕಾಂಗ್ರೆಸ್ ಈಗಿಲ್ಲ. ತ್ಯಾಗಬಲಿದಾನದ

ಸಂಪಾದಕೀಯ

ಕಾಂಗ್ರೆಸ್ ಹೋಗಿ ಅಧಿಕಾರದ ಲಾಲಸೆಯ, ಲಂಚಕೋರರಿಂದ ತುಂಬಿದ, ಬಂಡವಾಳಶಾಹಿ-ಜಮೀನ್ದಾರಿ ವರ್ಗಗಳ ಹಿತಸಾಧನೆ ಮಾಡುವವರ ಪಕ್ಷವಾಗಿ ಪರಿವರ್ತನೆಗೊಂಡಿದೆ. ಕಾರಣಾಂತರದಿಂದ ಕಾಂಗ್ರೆಸ್ (ಓ) ಮತ್ತು ಕಾಂಗ್ರೆಸ್ (ಆರ್) ಎಂದು 1969ರಲ್ಲಿ ಅದು ವಿಭಜನೆಗೊಂಡಿತು. ಕಾಂಗ್ರೆಸ್ (ಓ) ಜನತಾಪಕ್ಷದಲ್ಲಿ ವಿಲೀನಗೊಂಡನಂತರ ಕಾಂಗ್ರೆಸ್ (ಆರ್) 1978ರಲ್ಲಿ ಕಾಂಗ್ರೆಸ್ (ಐ) ಮತ್ತು ಕಾಂಗ್ರೆಸ್ (ಯು) ಎಂದು ಇಬ್ಭಾಗವಾಯಿತು. ಈಗ ಕಾಂಗ್ರೆಸ್ (ಯು) ಹೋಗಿ ಕಾಂಗ್ರೆಸ್ (ಎಸ್) ಆಗಿದ್ದು ಅಕ್ಟೋಬರ್ ತಿಂಗಳಲ್ಲಿ ನಡೆಯಲಿರುವ ಅಧಿವೇಶನದಲ್ಲಿ ಅದರ ಹೆಸರನ್ನು ನಿರ್ಧರಿಸಲಾಗಲಿದೆಂದು ಹೇಳಲಾಗಿದೆ.

ಭಾರತದಂಥ ಹಿಂದುಳಿದ ರಾಷ್ಟ್ರದಲ್ಲಿ ಪಕ್ಷಗಳು ಅಸ್ತಿತ್ವಕ್ಕೆ ಬರುವುದು ಹೋಗುವುದು ಅನಿವಾರ್ಯ. ಸಮಾಜದಲ್ಲಿ ವರ್ಗಗಳ ವಿಭಜನೆ ಸ್ಪಷ್ಟವಾಗಿರದಿದ್ದುದರಿಂದ ಮುಂದುವರಿದ ಬಂಡವಾಳಿದೇಶಗಳಲ್ಲಿದ್ದಂತೆ (ಇಂಗ್ಲೆಂಡಿನಲ್ಲಿ ಕನ್ಸರ್ವೇಟಿವ್ ಪಕ್ಷ, ಲೇಬರ್ ಪಕ್ಷ; ಅಮೇರಿಕದಲ್ಲಿ ಡೆಮಾಕ್ರಾಟಿಕ್ ಮತ್ತು ರಿಪಬ್ಲಿಕನ್ ಪಕ್ಷ) ಪಕ್ಷಗಳಿರಲು ಸಾಧ್ಯವಿಲ್ಲ. ಆಳುವವರ್ಗಗಳದ್ದೇ ಹಲವು ಪಕ್ಷಗಳು ನಮ್ಮಲ್ಲಿವೆ. ದುಡಿಯುವ ಜನ

[ಕಡೇ ಪುಟ ನೋಡಿ]

ಸೆ. 6ರಂದು ರಾಜ್ಯಮಟ್ಟದ ಎನ್.ಸಿ.ಸಿ.ಯ ಆಶ್ರಯದಲ್ಲಿ

ರಾಜ್ಯಮಟ್ಟದ ಸಮಾವೇಶ

ಜೂನ್4,1981ರಂದು ನಡೆದ ಮುಂಬೈ ಸಮಾವೇಶದ ತೀರ್ಮಾನಕ್ಕನುಗುಣವಾಗಿ ವಿವಿಧ ರಾಜ್ಯಗಳಲ್ಲಿ ರಾಜ್ಯಮಟ್ಟದ ರಾಷ್ಟ್ರೀಯ ಚಳವಳಿ ಸಮಿತಿ (ಎನ್.ಸಿ.ಸಿ.)ಯ ಆಶ್ರಯದಲ್ಲಿ ಕಾರ್ಮಿಕ ಸಮಾವೇಶಗಳು ನಡೆಯುತ್ತಿವೆ.

ಬೆಲೆ ಏರಿಕೆ ವಿರುದ್ಧ, ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ಧೋರಣೆಯ ವಿರುದ್ಧ ಜೂನ್ 4ರಂದು ಮುಂಬೈನಲ್ಲಿ ಸಮಾವೇಶ ನಡೆದಿತ್ತು. ಕೇಂದ್ರ ಸರಕಾರ ದಿನೇದಿನೇ ಕಾರ್ಮಿಕ ವಿರೋಧಿ ಧೋರಣೆಯನ್ನು ಅನುಸರಿಸುತ್ತಿದೆ. ಕಾರ್ಮಿಕರ ಮೇಲೆ, ಟ್ರೇಡ್‌ಯೂನಿಯನ್‌ನ ಸಕ್ರಿಯ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ನಡೆಸುತ್ತಿದೆ. ಕಾರ್ಮಿಕ ಸಂಘಟನೆಯ ಹಕ್ಕುಗಳನ್ನು, ಸಾಮೂಹಿಕ ಚೌಕಾಶಿ ಹಕ್ಕುಗಳನ್ನು ತುಳಿಯುತ್ತಿದೆ. ಇತ್ತೀಚಿನ ಮುಷ್ಕರ ನಿಷೇಧ ಸುಗ್ರೀವಾಜ್ಞೆ ಇದಕ್ಕೆ ನಿದರ್ಶನ. ದಿನಾಂಕ 26ರಂದು ಕೇಂದ್ರ ಆರ್ಥಿಕಮಂತ್ರಿ ವೆಂಕಟರಾಮ್‌ರು ಸಂಸತ್‌ಸದಸ್ಯರಿಗೆ ಉತ್ತರ ಕೊಡುತ್ತಾ, "ಬೆಲೆ ಸೂಚ್ಯಂಕಕ್ಕನುಗುಣವಾಗಿ ಕೇಂದ್ರ ನೌಕರರಿಗೆ ತುಟ್ಟಿ ಭತ್ತೆಯನ್ನು ಏರಿಸುವ ಸೂತ್ರಕ್ಕೆ ಸರಕಾರ ಬದ್ಧವಲ್ಲ"ವೆಂದು ಹೇಳಿಕೆ ನೀಡಿದ್ದಾರೆ.

ಜನತಾ ಸರಕಾರದ ಆಳ್ವಿಕೆಯುವಧಿಯಲ್ಲಿ (1978) ಕೈಗಾರಿಕಾ ಬಾಂಧವ್ಯ ಮಸೂದೆಯ ವಿರುದ್ಧ ಕಾರ್ಮಿಕರ ವ್ಯಾಪಕ ಸಂಯುಕ್ತ ಕಾರ್ಯಾಚರಣೆ ನಡೆದಿತ್ತು. ಈಗ ಆಳುವ ವರ್ಗದ ಜನವಿರೋಧಿ ಧೋರಣೆಗಳ ಬಗ್ಗೆ ನಡೆಯಬೇಕಾದ ಅವಶ್ಯಕತೆಯಿದೆ. ಜೀವನಾವಶ್ಯಕ ಸಾಮಗ್ರಿಗಳಾದ ಆಹಾರಧಾನ್ಯ, ಎಣ್ಣೆ, ಬಟ್ಟೆ, ಸಕ್ಕರೆ ಮುಂತಾದ ವಸ್ತುಗಳನ್ನು ಕಮ್ಮಿ ಬೆಲೆಯಲ್ಲಿ ಚುನಾಯಿತ ಗ್ರಾಹಕರ ಮಂಡಳಿಗಳ ಹಿಡಿತನದಲ್ಲಿ ಸಾರ್ವಜನಿಕ ವಿತರಣೆ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸಬೇಕಾಗಿದೆ.

[ಕಡೇ ಪುಟ ನೋಡಿ]

500ರೂ. ಕನಿಷ್ಟ ಕೂಲಿಗೆ ಒತ್ತಾಯಿಸಿ

ಆಗಸ್ಟ್ ೩೧ರಂದು ಬೇಡಿಕೆ ದಿನ

ಕನಿಷ್ಟ ವೇತನ ವ್ಯಾಪ್ತಿಗೆ ಒಳಪಡುವ ಕಾರ್ಮಿಕರ ದಕ್ಷಿಣ ಭಾರತ (ಕೇರಳ, ತಮಿಳ್ನಾಡು, ಆಂಧ್ರ ಮತ್ತು ಕರ್ನಾಟಕ) ಸಮಾವೇಶ ಕಳೆದ ಜುಲೈ 12 ಮತ್ತು 13ರಂದು ಹೈದರಾಬಾದ್‌ನಲ್ಲಿ ನಡೆದಿತ್ತು. ಕನಿಷ್ಟ ವೇತನ ವ್ಯಾಪ್ತಿಗೆ ಒಳಪಡುವ ಕಾರ್ಮಿಕರ ಸ್ಥಿತಿಗತಿಗಳನ್ನು ಆಳವಾಗಿ ಚರ್ಚಿಸಿ ಕನಿಷ್ಟ ಕೂಲಿ 500ರೂ. ದೊರೆಯಬೇಕೆಂಬ ನಿರ್ಣಯವನ್ನು ಹೈದರಾಬಾದ್ ಸಮಾವೇಶದಲ್ಲಿ ಅಂಗೀಕರಿಸಲಾಗಿತ್ತು. 500ರೂ. ಕನಿಷ್ಟ ಕೂಲಿಗೆ ಒತ್ತಾಯಿಸಿ ರಾಜ್ಯದಾದ್ಯಂತ ಆಗಸ್ಟ್ 31ರಂದು ಬೇಡಿಕೆ ದಿನವನ್ನು ಆಚರಿಲಿದ್ದಾರೆ.

ಜುಲೈನಲ್ಲಿ ಜರುಗಿದ ಹೈದರಾಬಾದ್ ಸಮಾವೇಶದಲ್ಲಿ ಕನಿಷ್ಟಕೂಲಿಗೆ ಸಂಬಂಧಿಸಿ ಅಂಗೀಕರಿಸಲಾದ ಮುಖ್ಯ ನಿರ್ಣಯದ ಸಾರಾಂಶ ಈ ಕೆಳಗಿನಂತಿದೆ.

"ಈ ನಾಲ್ಕು ರಾಜ್ಯಗಳ ಜನಸಂಖ್ಯೆಯ ಶೇ. 48ರಷ್ಟು ಜನತೆ ಜೀವನಮಟ್ಟ ಬಡತನ ರೇಖೆಗಿಂತ ಕೆಳಗಿದೆ. ಒಟ್ಟು 400ಲಕ್ಷ ಕಾರ್ಮಿಕರು ಕನಿಷ್ಟ ವೇತನದ ವ್ಯಾಪ್ತಿಯಲ್ಲಿ ಬರುವರು. ಅವರಿಗೆ ದೊರೆಯುವ ವೇತನದಲ್ಲಿ ಕನಿಷ್ಟ ಸೌಲಭ್ಯಗಳನ್ನೂ ಪೂರೈಸಲು ಸಾಧ್ಯವಾಗುವುದಿಲ್ಲ".

"ಪ್ರಸಕ್ತ ಕನಿಷ್ಟಕೂಲಿ ಕಾಯಿದೆ ಜಾರಿಗೆ ಬಂದದ್ದು 1948ರಲ್ಲಿ. 1957ರಲ್ಲಿ ನಡೆದ 15ನೇಯ ಇಂಡಿಯನ್ ಲೇಬರ್ ಕಾನ್‌ಫರೆನ್ಸ್ (Indian Labour Conference)ದ ಶಿಫಾರಸಿನಂತೆ ಜೀವನಕ್ಕೆ ಅಗತ್ಯವಿರುವ ಕೂಲಿ (Need-Based Minimum Wage) ಯನ್ನು ಯಾವದೇ ಕೈಗಾರಿಕೆ ಕೊಡುತ್ತಿಲ್ಲ. ನಗರ ಮತ್ತು ಗ್ರಾಮೀಣ ಕಾರ್ಮಿಕರ ಜೀವನಮಟ್ಟವನ್ನು ಉತ್ತಮಪಡಿಸಲು ಕನಿಷ್ಟ ಕೂಲಿ ಕಾಯಿದೆ ಸಹಾಯಕವಾಗುವ ಬದಲು ಅವರನ್ನು ಇನ್ನೂ ದಾರಿದ್ರ್ಯಕ್ಕೆ ನೂಕಿದೆ. ಕೆಲವು ಕೈಗಾರಿಕೆಗಳಲ್ಲಿ ರಾಜ್ಯಸರಕಾರಗಳು ನಿಗದಿಪಡಿಸಿರುವ ಕನಿಷ್ಟ ಕೂಲಿಯು ಮಟ್ಟ ತುಂಬ ಕೆಳಮಟ್ಟದಲ್ಲಿದೆ".

"ಕೆಲವು ಭಾಗಗಳಲ್ಲಿ, ಪ್ರದೇಶಗಳಲ್ಲಿ ಕೆಲವು ಕೈಗಾರಿಕೆಗಳ ಕಾರ್ಮಿಕರು ಸಂಘಟಿತರಾಗಿ ತಮ್ಮ ಮಾಲೀಕರಿಂದ ಸ್ವಲ್ಪ ಹೆಚ್ಚು ಕೂಲಿಯನ್ನು ಪಡೆಯುತ್ತಿದ್ದಾರೆ. ಕಾರ್ಮಿಕರ ಬಗ್ಗೆ ರಾಜ್ಯಸರಕಾರಗಳು ಎಷ್ಟು ಅಲಕ್ಷ್ಯದಿಂದಿವೆಯೆಂದರೆ ಒಪ್ಪಿಕೊಂಡ (Agreed) ವೇತನವನ್ನು ನಿರ್ಧಿಷ್ಟ ಕೈಗಾರಿಕೆಗಳಲ್ಲಿ ನಿಗದಿಪಡಿಸಿಲ್ಲ".

"ಬಲಿಷ್ಟ ಕಾರ್ಮಿಕ ಸಂಘಟನೆ ಕೇರಳದಲ್ಲಿರುವುದಾದ್ದರಿಂದ ಅಲ್ಲಿಯ ಕಾರ್ಮಿಕರು ಉಳಿದೆಡೆಗಿಂತ ಹೆಚ್ಚು ಕೂಲಿ ಪಡೆಯುತ್ತಿದ್ದಾರೆ. ಉಳಿದ ರಾಜ್ಯಗಳಲ್ಲಿ ಕೇರಳದಲ್ಲಿ ದೊರೆಯುತ್ತಿರುವ ವೇತನದ ಅರ್ಧದಷ್ಟೂ ದೊರೆಯುತ್ತಿಲ್ಲ. ಇದನ್ನು ದುರುಪಯೋಗಪಡಿಸಿಕೊಂಡು ಕೇರಳದ ಕೆಲವು ಕಾರ್ಖಾನೆಗಳ ಮಾಲೀಕರು ತಮ್ಮ ಕಾರ್ಖಾನೆಗಳನ್ನು ಬೇರೆ ಕಡೆ ಸ್ಥಳಾಂತರಿಸುತ್ತಿದ್ದಾರೆ".

"ಗಮನಿಸಬೇಕಾದ ಅಂಶವೆಂದರೆ ನಿಗದಿಪಡಿಸಿದ ಕನಿಷ್ಟ ಕೂಲಿಯೂ ಕೆಲವೆಡೆ ಜಾರಿಗೆ ಬರುತ್ತಿಲ್ಲ. ಕೇರಳ ಹೊರತುಪಡಿಸಿ ಉಳಿದ ರಾಜ್ಯಗಳ ಕಾರ್ಮಿಕ ಇಲಾಖೆ ನಿಯಮವನ್ನು ಉಲ್ಲಂಘಿಸುವವರ ಮೇಲೆ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ಕಾರ್ಮಿಕರು ಸಂಘಟಿಸಲು ಯತ್ನಿಸಿದರೆ ಮಾಲೀಕರು ಪೋಲೀಸರು ಮತ್ತು ಗೂಂಡಾಗಳನ್ನು ಉಪಯೋಗಿಸಿ ಹತ್ತಿಕ್ಕುತ್ತಿದ್ದಾರೆ".

"ಕೇಂದ್ರಕಾರ್ಮಿಕ ಸಂಘಟನೆಗಳ, ಇತರ ಫೆಡರೇಷನ್ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳ ಸಹಕಾರದಿಂದ ಪ್ರಬಲ ಚಳುವಳಿಯನ್ನು ನಾಲ್ಕೂ ರಾಜ್ಯಗಳ ಕನಿಷ್ಠ ಕೂಲಿಯ ವ್ಯಾಪ್ತಿಗೆ ಒಳಪಡುವ ಕಾರ್ಮಿಕರು ರೂಪಿಸಬೇಕಿದೆ".

"ತಮ್ಮ ಮತ್ತು ತಮ್ಮ ಕುಟುಂಬದ ದಾರಿದ್ರ್ಯಕ್ಕೆ ಕಾರಣವಾಗಿರುವ ಮಾಲೀಕರ ವಿರುದ್ಧ ಕಾರ್ಮಿಕರು ಸಿಡಿದೇಳಬೇಕಾಗಿದೆ. ಕನಿಷ್ಟ 500 ರೂ. ಕನಿಷ್ಠ ಕೂಲಿ ದೊರೆಯಬೇಕೆನ್ನುವ ಬೇಡಿಕೆಗೆ ಒತ್ತಾಯಿಸಬೇಕೆಂದು ಈ ಸಮಾವೇಶವು ಕರೆಕೊಡುತ್ತದೆ".

[6-9-81ರಂದು ಮಧ್ಯಾಹ್ನ 3-30ಕ್ಕೆ ಬೆಂಗಳೂರಿನ ಗಿಡ್ಡಣ್ಣ ಛತ್ರದಲ್ಲಿ ಕನಿಷ್ಟ ವೇತನ ವ್ಯಾಪ್ತಿಗೆ ಒಳಪಡುವಕಾರ್ಮಿಕರ ರಾಜ್ಯಮಟ್ಟದ ಸಭೆಯನ್ನು ಕರೆಯಲಾಗಿದೆ. ಹೈದರಾಬಾದ್‌ನಲ್ಲಿ ನಡೆದಿರುವ ದಕ್ಷಣ ರಾಜ್ಯಗಳ ಕನಿಷ್ಠ ಕೂಲಿಯ ವ್ಯಾಪ್ತಿಗೆ ಒಳಪಡುವ ಕಾರ್ಮಿಕರ ಸಮಾವೇಶದ ತೀರ್ಮಾನಗಳನ್ನು ಕಾರ್ಯಗತಗೊಳಿಸಲು ನಮ್ಮ ರಾಜ್ಯದಲ್ಲೂ ಕೂಡ ಹೋರಾಟದ ಕಾರ್ಯಕ್ರಮದ ರೂಪರೇಷೆಗಳನ್ನು ಚರ್ಚಿಸಲಾಗುವುದು. ಸಂಬಂಧಪಟ್ಟ ಕಾರ್ಮಿಕರು ಭಾಗವಹಿಸಬೇಕು.]

'ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ' ರಾಷ್ಟ್ರ ಚಳುವಳಿ

ಪ್ರತಿಯೊಬ್ಬ ಭಾರತೀಯ ಪ್ರಜೆಗೂ ವಿದ್ಯೆ, ಉದ್ಯೋಗಗಳನ್ನು ಒದಗಿಸಬೇಕೆಂದು ಒತ್ತಾಯಿಸಿ ರಾಷ್ಟ್ರದಾದ್ಯಂತ ವ್ಯಾಪಕ ಚಳುವಳಿ ಪ್ರಾರಂಭವಾಗಿದೆ. ಎಸ್. ಎಫ್. ಐ., ಡಿ. ವೈ. ಎಫ್. ಐ. ಸಂಘಟನೆಗಳು ಪ್ರಾರಂಭಿಸಿದ ಪ್ರಯತ್ನಕ್ಕೆ ಇದೀಗ ಇನ್ನೂ ಅನೇಕ ಸಂಘಟನೆಗಳು ಸಹಕಾರ ಹಸ್ತ ನೀಡಿವೆ. ಈ ಎರಡೂ ಸಂಘಟನೆಗಳ 'ಐಕ್ಯ ಹೋರಾಟ'ದ ನೀತಿಯ ಫಲವಾಗಿ ಇಂದು ಯುವಕ ಕಾಂಗ್ರೆಸ್ (ಯು), ಎನ್. ಎಸ್. ಯು. ಐ. (ಯು), ಯುವ ಲೋಕದಳ, ಕ್ರಾಂತಿಕಾರಿ ಯುವಜನ ಸಂಘಟನೆ ಮತ್ತು 'ಯೂತ್ ಫಾರ್ ಡೆಮಾಕ್ರಸಿ' ಸಂಘಟನೆಗಳೂ ಚಳುವಳಿಯ ಕಣಕ್ಕೆ ಧುಮುಕಿವೆ. ಈ ಏಳೂ ಸಂಘಟನೆಗಳ ಐಕ್ಯ ವೇದಿಕೆಯಾಗಿ 'ಅಖಿಲಭಾರತ ವಿದ್ಯಾರ್ಥಿ-ಯುವಜನ ಕ್ರಿಯಾಸಮಿತಿ' ರೂಪುಗೊಂಡಿದೆ.

ಚಳುವಳಿಯ ಪ್ರಥಮ ಹಂತವಾಗಿ 'ಸಹಿ ಸಂಗ್ರಹ' ಭರದಿಂದ ಸಾಗಿದೆ. ಪ್ರಧಾನ ಮಂತ್ರಿಯವರಿಗೆ ಸಲ್ಲಿಸಲಿರುವ ಬೇಡಿಕೆಗಳ ಮನವಿ ಪತ್ರಕ್ಕೆ ವಿದ್ಯಾರ್ಥಿ-ಯುವಜನರ ಸಹಿ ಸಂಗ್ರಹಿಸಲಾಗುತ್ತಿದೆ. ಇದೀಗ ಇನ್ನೂ ಕೆಲವು ಸಂಘಟನೆಗಳು ಕ್ರಿಯಾಸಮಿತಿಗೆ ಸೇರಿದ್ದರಿಂದ ಸಹಿ ಸಂಗ್ರಹದ ಗುರಿಯನ್ನು ಒಂದು ಕೋಟಿಯಿಂದ ಎರಡು ಕೋಟಿಗೆ ಏರಿಸಲಾಗಿದೆ. ಚಳುವಳಿಯ ಮತ್ತೊಂದು ಹಂತವಾಗಿ ರಾಷ್ಟ್ರದಾದ್ಯಂತ ಸ್ಥಳೀಯ, ಜಿಲ್ಲಾ ಮತ್ತು ರಾಜ್ಯಮಟ್ಟದ ಮೆರವಣಿಗೆಗಳು, ಸಭೆಗಳು ನಡೆಯುತ್ತಿವೆ. ಸೆಪ್ಟೆಂಬರ್ 15ರಂದು ದೆಹಲಿಯಲ್ಲಿ ನಡೆಯಲಿರುವ 'ಪಾರ್ಲಿಮೆಂಟ್ ಚಲೋ' ಕಾರ್ಯಕ್ರಮಕ್ಕೆ ವಿವಿಧ ರಾಜ್ಯಗಳ ಅಸಂಖ್ಯ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ದೇಶದ ವಿದ್ಯಾರ್ಥಿ-ಯುವಜನರ ಈ ಒಕ್ಕೊರಲಿನ ಬೇಡಿಕೆಯನ್ನು ಈಡೇರಿಸಲು ಭಾರತ ಸರ್ಕಾರ ಕ್ರಮವಹಿಸದಿದ್ದಲ್ಲಿ ಚಳುವಳಿಯನ್ನು ಮತ್ತಷ್ಟು ತೀವ್ರಗೊಳಿಸುವ ಯೋಜನೆಯಿದೆ. ಸ್ವಾತಂತ್ರ್ಯಾನಂತರ ನಮ್ಮ ದೇಶದ ವಿದ್ಯಾರ್ಥಿ-ಯುವಜನ ಸಮುದಾಯವು ನಿರ್ದಿಷ್ಟ ಬೇಡಿಕೆಗಳ ಆಧಾರದಲ್ಲಿ ರಾಷ್ಟ್ರವ್ಯಾಪಿಯಾದ ಹೋರಾಟಕ್ಕಿಳಿದಿರುವುದು ಇದೇ ಮೊದಲು. ಈ ಚಾರಿತ್ರಿಕ ಹೋರಾಟದ ಕಾರ್ಯಕ್ರಮವನ್ನು ಕರ್ನಾಟಕದಲ್ಲೂ ಪರಿಣಾಮಕಾರಿಯಾಗಿ ಜಾರಿಗೊಳಿಸಲು ರಾಜ್ಯದ ವಿದ್ಯಾರ್ಥಿ-ಯುವಜನ ಸಮುದಾಯಕ್ಕೆ ಈ ಮೂಲಕ ಕರೆ ನೀಡಲಾಗಿದೆ.

ರಾಜ್ಯದ ವಿವಿಧೆಡೆ ವಿದ್ಯಾರ್ಥಿ-ಯುವಜನರ ಮತ ಪ್ರದರ್ಶನ

'ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ' ರಾಷ್ಟ್ರ ಚಳುವಳಿಯ ಅಂಗವಾಗಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿ. ವೈ. ಎಫ್. ಐ.) ರಾಜ್ಯಸಮಿತಿಗಳ ಕರೆಯ ಮೇರೆಗೆ ರಾಜ್ಯದ ನಾನಾ ಕಡೆ ಆಗಸ್ಟ್ 20 ರಂದು ಸ್ಥಳೀಯ ಮಟ್ಟದಲ್ಲಿ ವಿದ್ಯಾರ್ಥಿ-ಯುವಜನರು ಮತಪ್ರದರ್ಶನ ನಡೆಸಿದ ವರದಿಗಳು ಬರುತ್ತಿವೆ.

ಕುಂದಾಪುರ

ದ. ಕ. ಜಿಲ್ಲೆಯ ಕುಂದಾಪುರದಲ್ಲಿ ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಸಂಘಟನೆಗಳ ನೇತೃತ್ವದಲ್ಲಿ ವಿದ್ಯಾರ್ಥಿ-ಯುವಜನರ ಮೆರವಣಿಗೆ ನಡೆಯಿತು. ಕುಂದಾಪುರದ ನಾಗರೀಕರನ್ನು ಆಕರ್ಷಿಸಿದ ಈ ಮೆರವಣಿಗೆಯ ನಂತರ ಶ್ರೀ ಶಂಕರಖಾರ್ವಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಜರುಗಿತು. ಮಹಾಬಲ ವಡೇರ ಹೋಬಳಿ, ಶಿವಾನಂದ ಕೋಡಿ, ಗಣಪ ಬಂಗೇರ ಮತ್ತು ಶಿವರಾಮ ಇವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ವಿಶ್ವನಾಥ ಖಾರ್ವಿಯವರು ವಂದನಾರ್ಪಣೆ ಮಾಡಿದರು.

ರಾಯಚೂರು

ಆಗಸ್ಟ್ 20ರಂದು ರಾಯಚೂರಿನಲ್ಲಿ ವಿದ್ಯಾರ್ಥಿಗಳು ಎಲ್ಲಾ ಶಾಲಾ-ಕಾಲೇಜುಗಳನ್ನು ಬಹಿಷ್ಕರಿಸಿ ಬೃಹತ್ ಮೆರವಣಿಗೆ ನಡೆಸಿದರು. 'ಸರ್ವರಿಗೂ ಶಿಕ್ಷಣ', 'ಸರ್ವರಿಗೂ ಉದ್ಯೋಗ' ಎಂಬ ಘೋಷಣೆಗಳನ್ನು ಕೂಗುತ್ತಾ ಹೊರಟ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳ ಕಛೇರಿ ಬಳಿ ಸಭೆ ಸೇರಿ ಮನವಿ ಸಲ್ಲಿಸಿದರು.

ಚಿಂತಾಮಣಿ

ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಆಗಸ್ಟ್ 20ರಂದು ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳನ್ನು ಬಹಿಷ್ಕರಿಸಿ ಮೆರವಣಿಗೆ ನಡೆಸಿದರು. ಈ ಹಿಂದೆ ಜನವರಿ 21 ರಂದು ಬಸ್‌ದರ ಏರಿಕೆಯ ವಿರುದ್ಧ ಪ್ರತಿಭಟಿಸಿದ ವಿದ್ಯಾರ್ಥಿ ಪ್ರದರ್ಶನದ ಮೇಲೆ ಪೋಲೀಸರು ಇಲ್ಲಿ ಗೋಲಿಬಾರ್ ಮಾಡಿದ್ದನ್ನು ಸ್ಮರಿಸಬಹುದು. ಈ ಹಿನ್ನೆಲೆಯಲ್ಲಿ ಪೋಲೀಸರು ಆಗಸ್ಟ್ 20ರಂದು ಭಾರಿ ಸಂಖ್ಯೆಯಲ್ಲಿ ಜಮಾಯಿಸಿ ವಿದ್ಯಾರ್ಥಿಗಳ ಜೊತೆ ತಮ್ಮದೂ ಒಂದು ಮೆರವಣಿಗೆ ನಡೆಸಿದರು. ಬಂದೂಕಧಾರಿ ಪೋಲೀಸರ ಜಮಾವಣೆಗೆ ಬೆದರದೆ ನೂರಾರು ವಿದ್ಯಾರ್ಥಿಗಳು ಘೋಷಣೆಗಳೊಂದಿಗೆ ಮೆರವಣಿಗೆ ಹೊರಟು ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಿದರು. ತಾಲ್ಲೂಕು ಕಛೇರಿ ಬಳಿ ನಡೆದ ಸಭೆಯಲ್ಲಿ ಸುಮಾರು ಸಾವಿರ ಮಂದಿ ಭಾಗವಹಿಸಿದ್ದರು. ಶಾಂತರೀತಿಯಲ್ಲಿ ಕಾರ್ಯಕ್ರಮ ನಡೆಸಿದ್ದಕ್ಕಾಗಿ ಪೋಲೀಸ್ ಅಧಿಕಾರಿಗಳು ಎಸ್. ಎಫ್. ಐ. ಮುಖಂಡರನ್ನು ಶ್ಲಾಘಿಸಿದರೆಂದು ತಿಳಿದು ಬಂದಿದೆ.

ಧಾರವಾಡ

ಧಾರವಾಡದಲ್ಲಿ ಆಗಸ್ಟ್ 20ರಂದು ಜಿಲ್ಲಾಧಿಕಾರಿಗಳ ಕಛೇರಿಯೆದುರು ಎಸ್. ಎಫ್. ಐ., ಡಿ. ವೈ. ಎಫ್. ಐ. ನೇತೃತ್ವದಲ್ಲಿ ವಿದ್ಯಾರ್ಥಿ-ಯುವಜನರು ಮತಪ್ರದರ್ಶನ ನಡೆಸಿ ಮನವಿ ಸಲ್ಲಿಸಿದರು. ನಂತರ ನಡೆದ ಸಭೆಯಲ್ಲಿ ಎಸ್. ಎಫ್. ಐ. ರಾಜ್ಯಸಮಿತಿ ಉಪಾಧ್ಯಕ್ಷ ಕಾಂ. ರುದ್ರಪ್ಪಕಾಯಿ, ಡಿ. ವೈ. ಎಫ್. ಐ. ಜಿಲ್ಲಾ ಸಂಚಾಲಕ ಕಾಂ. ಜಿ. ಕಮ್ಮಾರ ರವರು ಮಾತನಾಡಿ ಭಾರತ ಸರ್ಕಾರದ ದಿವಾಳಿಕೋರ ನೀತಿಯನ್ನು ಖಂಡಿಸಿದರು. ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಜಿಲ್ಲಾ ಮುಖಂಡರಾದ ಕಾಂ. ಪಿ. ಉಷಾ, ವಿ. ಆರ್. ರೆಡ್ಡಿಯವರು ಸಹ ಕಾರ್ಯಕ್ರಮದ ಮುಖಂಡತ್ವ ವಹಿಸಿದ್ದರು.

ಮಂಗಳೂರು

ಮಂಗಳೂರಿನಲ್ಲಿ ಆಗಸ್ಟ್ 20 ರಂದು ವಿದ್ಯಾರ್ಥಿ-ಯುವಜನರು ಎಸ್. ಎಫ್. ಐ. ಕಛೇರಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಸಭೆ ನಡೆಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಎಸ್. ಎಫ್. ಐ. ಜಿಲ್ಲಾಸಮಿತಿ ಕಾರ್ಯದರ್ಶಿ ಕಾಂ. ಉಮೇಶ್‌ಭಂಡಾರಿ ಮತ್ತು ಕಾಂ. ಬಿ. ಮಾಧವರವರು ದೇಶದಲ್ಲಿನ ಅನಕ್ಷರತೆ ಮತ್ತು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವಲ್ಲಿ ಭಾರತ ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ತೀವ್ರವಾಗಿ ಖಂಡಿಸಿದರು. ಡಿ.ವೈ.ಎಫ್.ಐ. ಮುಖಂಡ ಕಾಂ. ಯು. ಬಿ. ನಾರಾಯಣರವರು ಸ್ವಾಗತಿಸಿ ಎಸ್. ಎಫ್. ಐ.ನ ಮಂಗಳೂರು ನಗರ ಸಮಿತಿ ಕಾರ್ಯದರ್ಶಿಯವರು ವಂದಿಸಿದರು. ವಿಪರೀತ ಮಳೆಯ ಕಾರಣ ಮೆರವಣಿಗೆ ಮತ್ತು ಬಹಿರಂಗ ಸಭೆಗಳ ಕಾರ್ಯಕ್ರಮವನ್ನು ಅನಿವಾರ್ಯವಾಗಿ ರದ್ದುಗೊಳಿಸಲಾಯಿತು.

ಮೈಸೂರು

ಮೈಸೂರಿನಲ್ಲಿ ರಾಷ್ಟ್ರ ಚಳುವಳಿಯ ಕಾರ್ಯಕ್ರಮದ ಅಂಗವಾಗಿ ಆಗಸ್ಟ್ 20ರಂದು ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಸಂಘಟನೆಗಳು ನಡೆಸಿದ ವಿಚಾರಗೋಷ್ಠಿಯಲ್ಲಿ ವಿದ್ಯಾರ್ಥಿ-ಯುವಜನರು ಅಧಿಕಸಂಖ್ಯೆಯಲ್ಲಿ ಭಾಗವಹಿಸಿದ್ದರು.

'ವಿಧಾನ ಸೌಧ ಚಲೋ' ಕಾರ್ಯಕ್ರಮ ಮುಂದೂಡಿಕೆ

'ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ'ದ ಬೇಡಿಕೆಗಾಗಿ ಎಸ್. ಎಫ್. ಐ. ಮತ್ತು ಡಿ.ವೈ.ಎಫ್.ಐ. ಸಂಘಟನೆಗಳ ನೇತೃತ್ವದಲ್ಲಿ ಪ್ರಾರಂಭವಾಗಿರುವ 'ರಾಷ್ಟ್ರ ಚಳುವಳಿ'ಯ ಕಾರ್ಯಕ್ರಮದ ಅಂಗವಾಗಿ ಸೆಪ್ಟೆಂಬರ್ 1ರಂದು ಬೆಂಗಳೂರಿನಲ್ಲಿ ನಡೆಸಲು ಉದ್ದೇಶಿಸಲಾಗಿದ್ದ ರಾಜ್ಯಮಟ್ಟದ ರ‍್ಯಾಲಿಯನ್ನು ಸೆಪ್ಟೆಂಬರ್ 10ಕ್ಕೆ ಮುಂದೂಡಲಾಗಿದೆ. ಎಸ್. ಎಫ್.ಐ. ಮತ್ತು ಡಿ.ವೈ.ಎಫ್.ಐ. ಶಾಖೆಗಳು ಈ ಬದಲಾವಣೆಯನ್ನು ಗಮನಿಸಬೇಕಾಗಿ ವಿನಂತಿಸಲಾಗಿದೆ. ಸೆಪ್ಟೆಂಬರ್ 10ಕ್ಕೆ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿ-ಯುವಜನರನ್ನು ಕರೆತರಲು ಮತ್ತು ಸಹಿಸಂಗ್ರಹ ಚಳುವಳಿಯನ್ನು ಮತ್ತಷ್ಟು ತೀವ್ರಗೊಳಿಸಲು ಈ ಮೂಲಕ ಕರೆ ನೀಡಲಾಗಿದೆ. ಬೆಂಗಳೂರಿನ ರ‍್ಯಾಲಿಗೆ ಬರುವಾಗ ಸಹಿಸಂಗ್ರಹಿಸಿದ ಸಹಿಗಳನ್ನು ತಪ್ಪದೆ ತರಬೇಕಾಗಿ ತಿಳಿಸಲಾಗಿದೆ.

ಎಸ್.ಎಫ್.ಐ. ರಾಜ್ಯಸಮಿತಿಯ ಕಾರ್ಯದರ್ಶಿ ಮಂಡಳಿಯ ಕರೆಯ ಮೇರೆಗೆ ರಾಜ್ಯದ ಹಲವಾರು ಭಾಗಗಳಿಂದ ಸೆಪ್ಟೆಂಬರ್ 10ರ ರ‍್ಯಾಲಿಗೆ 'ಸೈಕಲ್ ಜಾತಾ' ಬರಲು ತೀರ್ಮಾನಿಸಲಾಗಿದೆ. ಬೆಂಗಳೂರಿನ ಸುತ್ತಮುತ್ತಲಿನ ಜಿಲ್ಲೆಗಳಿಂದ ಆದಷ್ಟು ಹೆಚ್ಚು ಸೈಕಲ್ ಜಾತಾಗಳನ್ನು ಸಂಘಟಿಸಬೇಕಾಗಿ ರಾಜ್ಯ ಸಮಿತಿಯು ವಿನಂತಿಸಿದೆ. ದಾರಿಯುದ್ದಕ್ಕೂ ಶಾಲಾ-ಕಾಲೇಜುಗಳಲ್ಲಿ 'ಸರ್ವರಿಗೂ ಶಿಕ್ಷಣ ; ಸರ್ವರಿಗೂ ಉದ್ಯೋಗ'ದ ಘೋಷಣೆಯನ್ನು ಪ್ರಚಾರ ಮಾಡಲು ಮತ್ತು ಹೋರಾಟ ನಿಧಿಯನ್ನು ಸಂಗ್ರಹಿಸಲು ಸಹ ತಿಳಿಸಲಾಗಿದೆ.

ರ‍್ಯಾಲಿಯ ಕಾರ್ಯಕ್ರಮಕ್ಕೆ ಬರುವ ಸಂಗಾತಿಗಳಿಗೆ ವಸತಿ ಸೌಕರ್ಯ ಒದಗಿಸಲಾಗುತ್ತದೆ. ಸೆಪ್ಟೆಂಬರ್ 10 ರಂದು ಬೆಂಗಳೂರಿನ ಬಸ್ ನಿಲ್ದಾಣ ಮತ್ತು ರೈಲ್ವೆ ಸ್ಟೇಷನ್‌ಗಳ ಬಳಿ ಸ್ವಯಂಸೇವಕರೂ ಇರುತ್ತಾರೆ.

ಎಸ್.ಎಫ್.ಐ. ರಾಜ್ಯ ಸಮಿತಿ ಸಭೆ

ಬೆಂಗಳೂರಿನ ರ‍್ಯಾಲಿಯ ನಂತರ ಸೆಪ್ಟೆಂಬರ್ 11ರಂದು ಬೆಂಗಳೂರಿನಲ್ಲಿ ಎಸ್. ಎಫ್. ಐ ರಾಜ್ಯ ಸಮಿತಿಯ ಪದಾಧಿಕಾರಿಗಳ ಸಭೆಯೂ, ಸೆಪ್ಟೆಂಬರ್ 12 ರಂದು ರಾಜ್ಯ ಸಮಿತಿ ಸಭೆಯೂ ಜರುಗುತ್ತದೆ. ರಾಜ್ಯ ಸಮಿತಿ ಸದಸ್ಯರು ಲಿಖಿತ ವರದಿಯೊಂದಿಗೆ ಸಭೆಗೆ ತಪ್ಪದೆ ಹಾಜರಾಗಬೇಕಾಗಿ ಮತ್ತು ಸದಸ್ಯತ್ವದ ಪುಸ್ತಕಗಳನ್ನು ತಪ್ಪದೆ ತರಬೇಕಾಗಿ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಕೋರಿದ್ದಾರೆ.

ಪಾರ್ಲಿಮೆಂಟ್ ಚಲೋ ಕಾರ್ಯಕ್ರಮ

ಅಖಿಲ ಭಾರತ ವಿದ್ಯಾರ್ಥಿ-ಯುವಜನ ಕ್ರಿಯಾ ಸಮಿತಿಯು ರಾಷ್ಟ್ರ ಚಳುವಳಿಯ ಅಂಗವಾಗಿ ಸೆಪ್ಟೆಂಬರ್ 15 ರಂದು ನವದೆಹಲಿಯಲ್ಲಿ ಬೃಹತ್ ವಿದ್ಯಾರ್ಥಿ-ಯುವಜನ ರ‍್ಯಾಲಿ ನಡೆಸಲು ತೀರ್ಮಾನಿಸಿದೆ. ಆ ದಿನದಂದು ವಿದ್ಯಾರ್ಥಿ-ಯುವಜನ ಸಮುದಾಯ ಸಾಗರವು ಕೋಟಿ ಕೋಟಿ ಸಹಿಗಳೊಂದಿಗೆ, 'ಸರ್ವರಿಗೂ ಶಿಕ್ಷಣ; ಸರ್ವರಿಗೂ ಉದ್ಯೋಗ' ಎಂಬ ಘೋಷಣೆಗಳ ಘರ್ಜನೆಯೊಂದಿಗೆ ಪಾರ್ಲಿಮೆಂಟ್‌ಗೆ ತೆರಳಿ ಪ್ರಧಾನ ಮಂತ್ರಿಯವರಿಗೆ ಬೇಡಿಕೆಗಳ ಮನವಿ ಸಲ್ಲಿಸಲಿದ್ದಾರೆ.

ಈ ಚಾರಿತ್ರಿಕ ರ‍್ಯಾಲಿಗೆ ಕರ್ನಾಟಕದಿಂದಲೂ ಆದಷ್ಟು ಹೆಚ್ಚು ಪ್ರತಿನಿಧಿಗಳನ್ನು ಕಳುಹಿಸಲು ಎಸ್.ಎಫ್. ಐ. ಮತ್ತು ಡಿ.ವೈ.ಎಫ್.ಐ. ಶಾಖೆಗಳು ಶ್ರಮಿಸಬೇಕಾಗಿದೆ. ಪ್ರತಿಯೊಬ್ಬ ಪ್ರತಿನಿಧಿಗೆ ಒಟ್ಟು ಸುಮಾರು 300 ರೂಗಳು ವೆಚ್ಚವಾಗುತ್ತದೆ. ಹೆಚ್ಚು ಸಮಯವಿಲ್ಲದ್ದರಿಂದ ಬರಲಿರುವ ಪ್ರತಿನಿಧಿಗಳು ಸುದ್ದಿ ತಲುಪಿದ ತಕ್ಷಣ ರೈಲ್ವೆ ಪ್ರಯಾಣದ ರಿಸರ್ವೇಶನ್‌ಗಾಗಿ 100 ರೂಗಳನ್ನು ಎಸ್. ಎಫ್.ಐ. ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಆರಾಧ್ಯರವರ ವಿಳಾಸಕ್ಕೆ ಟೆಲಿಗ್ರಾಂ ಮನಿ ಆರ್ಡರ್ ಕಳುಹಿಸಬೇಕಾಗಿ ಕೋರಲಾಗಿದೆ. ಸೆಪ್ಟೆಂಬರ್ 13ರಂದು ಮುಂಜಾನೆ ಪ್ರತಿನಿಧಿಗಳ ತಂಡವು ಬೆಂಗಳೂರಿನಿಂದ ದೆಹಲಿಗೆ ಹೊರಡುತ್ತದೆ.

●

ಎಸ್. ಎಫ್. ಐ. ಕಛೇರಿ ಬದಲಾವಣೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ರಾಜ್ಯ ಸಮಿತಿಯ ಕಛೇರಿಯನ್ನು ಆಗಸ್ಟ್ 15 ರಿಂದ ಬದಲಾಯಿಸಲಾಗಿದೆ. ಆದ್ದರಿಂದ ಇನ್ನು ಮುಂದೆ ನೂತನ ಕಛೇರಿಯೊಂದಿಗೆ ಪತ್ರಸಂಪರ್ಕವಿಟ್ಟುಕೊಳ್ಳಬೇಕಾಗಿ ಪ್ರಧಾನಕಾರ್ಯದರ್ಶಿ ಎಸ್. ಆರ್. ಆರಾಧ್ಯ ವಿನಂತಿಸಿದ್ದಾರೆ.

ವಿಳಾಸ:

169/1, Top Floor, II Main Road,
Chamarajpet, Bangalore-560018.

ಸಾಮ್ರಾಜ್ಯವಾದಿಗಳ ಕುತಂತ್ರಗಳು; ಆಳುವ ವರ್ಗದ ಮೋಸಗಳು

[ದೇಶಕ್ಕೆ ಸಾಮ್ರಾಜ್ಯವಾದದ ಅಪಾಯವನ್ನೂ, ನಮ್ಮ ಆಳುವ ವರ್ಗಗಳು ಸಾಮ್ರಾಜ್ಯವಾದದ ಬಗ್ಗೆ ಅನುಸರಿಸಿದ ನೀತಿಯನ್ನೂ, ಈ ಪರಿಸ್ಥಿತಿಯಲ್ಲಿ ಕಾರ್ಮಿಕವರ್ಗದ ಪರಮ ಕರ್ತವ್ಯವನ್ನೂ ಸ್ಥೂಲವಾಗಿ ವಿಶ್ಲೇಷಿಸುವ ಕಾಂ. ವಿ.ಜೆ.ಕೆ.ಯವರ ಲೇಖನದ ದ್ವಿತೀಯ ಭಾಗ 16-8-81ರ ಸಂಚಿಕೆಯಿಂದ ಮುಂದುವರಿಸುತ್ತಿದ್ದೇವೆ.]

ಆದ್ದರಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಕಾರ್ಯಕ್ರಮದಲ್ಲಿ ಈ ರಾಷ್ಟ್ರದ ಜನರು ಸ್ವಯಂ ನಿರ್ಧರಿಸುವ ಹಕ್ಕನ್ನು ಅಳವಡಿಸಿಕೊಂಡಿತು. ಆದರೂ ಸಹ ಸ್ವಾತಂತ್ರ್ಯಪೂರ್ವ ಅನುಭವವು ಪಕ್ಷದ ಈ ಕಾರ್ಯಕ್ರಮವನ್ನು ತಿದ್ದುಪಡಿ ಮಾಡುವಂತೆ ಮಾಡಿತು. ಹೀಗಾಗಿ 1972ರಲ್ಲಿ ನಡೆದ ಪಕ್ಷದ 9ನೇ ಅಧಿವೇಶನದಲ್ಲಿ 'ದೇಶದ ಯಾವುದೇ ಒಂದು ರಾಷ್ಟ್ರೀಯತೆಯು ತನ್ನೊಟ್ಟಿಗೆ ಇರುವ ಇತರ ರಾಷ್ಟ್ರೀಯತೆಗಳನ್ನು ತುಳಿಯುತ್ತಿಲ್ಲ' ಕಾರಣದಿಂದಾಗಿ ಸ್ವಯಂ ನಿರ್ಧರಿಸುವ ಹಕ್ಕನ್ನು ತಿದ್ದುಪಡಿಮಾಡಿತು. ಸ್ವಯಂ ಅಧಿಕಾರದ ಒಂದು ಸಾಮ್ರಾಜ್ಯದಿಂದ ಹೊರಹೋಗುವ ಹಕ್ಕಿನಂತಿದೆ. ಭಾರತದ ರಾಷ್ಟ್ರೀಯತೆಗಳು ಯಾವ ಸಾಮ್ರಾಜ್ಯದ ಭಾಗವೂ ಅಲ್ಲದಿರುವುದರಿಂದ ಮತ್ತು ಭಾರತದಲ್ಲಿ ರಾಷ್ಟ್ರೀಯತೆಯ ದಮನವೂ ಇಲ್ಲದಿರುವುದರಿಂದ ಹೊರಹೋಗುವ ಪ್ರಶ್ನೆ ಉದ್ಭವವಾಗುವುದಿಲ್ಲ. ಕೇಂದ್ರೀಕೃತವಾದ ಬಂಡವಾಳಶಾಹಿ-ಭೂಮಾಲಕರ ಆಳ್ವಿಕೆಯಿಂದ ಭಾರತದ ಜನತೆಯು ತಮ್ಮನ್ನು ತಾವು ಬಿಡುಗಡೆಗೊಳಿಸಿಕೊಳ್ಳಲು ಎಲ್ಲಾ ದುಡಿಯುವ ಜನಸಮುದಾಯದ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೊಂದೊಡಗೂಡಿದಅಖಿಲ ಭಾರತ ಮಟ್ಟದ ಒಂದು ಚಳುವಳಿಯನ್ನು ಕಟ್ಟಬೇಕು. ಸಂಕುಚಿತವಾದಿಗಳ ವಿರುದ್ಧ ಜನತೆಯ ಐಕ್ಯವನ್ನು ಕಾಪಾಡಬೇಕು. ನಮ್ಮ ದೇಶದಲ್ಲಿನ ವಿಶಿಷ್ಟವಾದ ರಾಷ್ಟ್ರೀಯ ಸಂಸ್ಕೃತಿಗಳನ್ನು ಬೆಳೆಸುವುದಕ್ಕೆ ನಾವು ಬದ್ಧರಾಗಬೇಕು. ಜೊತೆಗೆ ಜನತೆಯ ಐಕ್ಯವನ್ನು ಸಡಿಲಗೊಳಿಸುವ ಭಾಷಾಂಧತೆಯನ್ನು, ಮಣ್ಣಿನಮಕ್ಕಳವಾದವನ್ನು ನಾವು ಹಿಮ್ಮೆಟ್ಟಿಸಬೇಕು.

ನಮ್ಮ ಜನರು ತಮ್ಮಲ್ಲಿ ತಾವೇ ಕಚ್ಚಾಡುವಂತೆ ಮಾಡಲು ನಮ್ಮ ದೇಶದ ಬಹುಭಾಷಾ ಸ್ವಭಾವವನ್ನು ಬಳಸಬಹುದೆಂದು ಸಾಮ್ರಾಜ್ಯವಾದಿಗಳ ಏಜೆಂಟರು ಕಂಡುಕೊಂಡಿದ್ದಾರೆ. ಅಭಿವೃದ್ಧಿ ಯೋಜನೆಗಳಲ್ಲಿ ಹೆಚ್ಚು ಹೆಚ್ಚು ಪಡೆಯಲು ತಮ್ಮತಮ್ಮಲ್ಲೇ ಪ್ರಯತ್ನಿಸುವ ವಿವಿಧ ರಾಷ್ಟ್ರೀಯತೆಗಳ ವಸ್ತುಸಂಗ್ರಹಾಲಯವೆಂದು ಸಾಮ್ರಾಜ್ಯಶಾಹಿಗಳು ಕಂಡುಕೊಂಡಿದ್ದಾರೆ. ವಿವಿಧ ರಾಷ್ಟ್ರೀಯತೆಗಳ ಮತ್ತು ಬುಡಕಟ್ಟುಗಳ ಈ ಸ್ಪರ್ಧೆಯು ವಿಛಿದ್ರಕಾರಿ ಚಟುವಟಿಕೆಗಳಿಗೆ ಅವಕಾಶಗಳನ್ನು ಒದಗಿಸಿಕೊಡುತ್ತದೆಂಬುದನ್ನು ಅವರು ಕಂಡುಕೊಂಡಿದ್ದಾರೆ. ನ್ಯೂಲೆಪ್ಪ ಹೆಸರಿನ ಸಾಮ್ರಾಜ್ಯವಾದಿಗಳ ಏಜೆಂಟರು ವಿವಿಧ ರಾಷ್ಟ್ರೀಯತೆಗಳ ಭಾವನೆಗಳನ್ನು ಸಮರ್ಥವಾಗಿ ಬಳಸಬಹುದೆಂಬುದನ್ನೂ ಅರಿತಿದ್ದಾರೆ. ಈ ದೇಶದ ರಾಜಕೀಯ ಜೀವನದಲ್ಲಿ ಹಸ್ತಕ್ಷೇಪ ನಡೆಸಲು ತಮ್ಮ ದುರುದ್ದೇಶಗಳನ್ನು ಸಾಧಿಸಲು ಸಾಮ್ರಾಜ್ಯವಾದಿಗಳ ಏಜೆಂಟರು ಇವುಗಳನ್ನು ಬಳಸಲು ಯೋಜನೆಗಳನ್ನು ಸಿದ್ಧಗೊಳಿಸಿದ್ದಾರೆ.

ದಕ್ಷಿಣಭಾರತದಲ್ಲಿ ಒಂದು ಉಕ್ಕು ಕಾರ್ಖಾನೆಯನ್ನು ಸ್ಥಾಪಿಸಲು ಯೋಜಿಸಿದಾಗ ತಮಿಳರು, ಕನ್ನಡಿಗರು, ಆಂಧ್ರದವರು ಅದನ್ನು ಸೇಲಂ, ವಿಜಯನಗರ ಮತ್ತು ವಿಶಾಖಪಟ್ಟಣದಲ್ಲಿ ಹಾಕಿಸಲು ಹೋರಾಡಿರುವುದನ್ನು ವಿವಿಧ ರಾಷ್ಟ್ರೀಯ ಭಾವನೆಗಳು ಹೇಗೆ ಕೆಲಸಮಾಡುತ್ತಿವೆ ಎಂಬುದನ್ನು ನೋಡಬಹುದು. ಅದೇ ರೀತಿ ತೆಲಂಗಾಣಕ್ಕೆ ಮಾತ್ರ ಅನ್ವಯವಾಗುತ್ತಿದ್ದ ಮುಲ್ಕಿ ಕಾನೂನು ಆಂಧ್ರವನ್ನು ತೆಲಂಗಾಣ ಮತ್ತು ಆಂಧ್ರ ಎಂಬೆರಡು ಉಪರಾಷ್ಟ್ರೀಯತೆಯ ಆಧಾರದಲ್ಲಿ ಹೊಡೆದಾಡುವಂತೆ ಮಾಡಿತು. ರಾಷ್ಟ್ರೀಯ ಭಾವನೆಗಳನ್ನು ಯಾವ ಮಟ್ಟದಲ್ಲಿ ಉಪಯೋಗಿಸಬಹುದೆಂಬುದಕ್ಕೆ ಅಸ್ಸಾಂ ಚಳುವಳಿ ಒಂದು ಸ್ಪಷ್ಟ ಉದಾಹರಣೆ. ಅಸ್ಸಾಂ ಚಳುವಳಿಯ ನಿಜವಾದ ಸ್ವರೂಪವನ್ನು ಸಿ.ಪಿ.ಐ.(ಎಂ) ಬಯಲಿಗೆಳೆದಿದೆ. "ಅಪರೇಷನ್ ಬ್ರಹ್ಮಪುತ್ರಾ" ಎಂಬ ಹೆಸರಿನ ಯೋಜನೆಯಡಿಯಲ್ಲಿ ಸಿ.ಐ.ಎ. ಇದನ್ನು ಹುಟ್ಟುಹಾಕಿದೆ. ಇದು ಎಲ್ಲಿಯವರೆಗೆ ಹೋಯಿತೆಂದರೆ ಕಚ್ಚಾತೈಲದ ಸರಬರಾಜಿನ ಮೇಲೆ ದಿಗ್ಬಂಧನ ಹೇರಲಾಯಿತು. ಈಶಾನ್ಯದ ಏಳುರಾಜ್ಯಗಳನ್ನು ಭಾರತದಿಂದ ಪ್ರತ್ಯೇಕಿಸಲು ಒಂದು ತಂತ್ರವನ್ನು ಸಾಮ್ರಾಜ್ಯಶಾಹಿಗಳು ಹೂಡಿದ್ದನ್ನು ಸಿ.ಪಿ.ಐ.(ಎಂ) ಬಯಲಿಗೆಳೆದಿದೆ.

ಅದೇ ರೀತಿ ಭಾರತದ ಎಲ್ಲಾ ಕಡೆ ಆ ರಾಜ್ಯದ ಭಾಷೆಯಲ್ಲದ ಭಾಷೆಯ ಬೋರ್ಡುಗಳಿಗೆ ಕಪ್ಪುಬಣ್ಣ ಬಳಿದ ಸಂಗತಿಯನ್ನು ನಾವು ಕಾಣುತ್ತಿದ್ದೇವೆ. ಕರ್ನಾಟಕದಲ್ಲಿ 'ನಾವು ಕನ್ನಡಿಗರು', ತಮಿಳುನಾಡಿನಲ್ಲಿ 'ನಾವ್ ತಮಿಳರ್' ಬಂಗಾಲದಲ್ಲಿ 'ಆಮ್ರಿ ಬಂಗಾಲಿ' ಎಂಬೀತರಹದ ಸಂಘಟನೆಗಳು ಚಟುವಟಿಕೆಯಲ್ಲಿವೆ. ಎಲ್ಲ ಭಾಷೆಯ ಗುಂಪುಗಳನ್ನು "ನಾವು" ಎಂಬ ಭಾವನೆಯನ್ನು ಬಳಸಿ ಸಂಘಟಿಸಲು ಯತ್ನಿಸಲಾಗುತ್ತಿದೆ. ಪರಿಸ್ಥಿತಿಯ ವ್ಯಂಗ್ಯವೆಂದರೆ ಇಂಗ್ಲೀಷ್ ಮಾತನಾಡುವ ಅಮೇರಿಕದವರೇ ಇಂಗ್ಲೀಷ್ ವಿರೋಧಿ ಪ್ರಚಾರಕ್ಕೆ ಹಣಕಾಸು ಒದಗಿಸುತ್ತಾರೆ. ತನ್ನ ಭಾಷೆಯ ಬಗ್ಗೆ ಗೌರವಹೊಂದಲು ಪ್ರತಿಯೊಬ್ಬನಿಗೂ ಹಕ್ಕಿರಬೇಕು. ಆದರೆ ಈ ಹಕ್ಕನ್ನು ಸಮರ್ಥವಾಗಿ ರಕ್ಷಿಸಲು, ಬೇರೆಯವರಿಗೂ ತಮ್ಮ ಭಾಷೆಯ ಬಗ್ಗೆ ಗೌರವಹೊಂದುವ ಹಕ್ಕನ್ನು ರಕ್ಷಿಸಬೇಕಾಗುತ್ತದೆ. ತಮ್ಮ ಮಾತೃಭಾಷೆಯಲ್ಲೇ ಆಡಳಿತ ಮತ್ತು ಶಿಕ್ಷಣ ದೊರೆಯಬೇಕೆಂದು ಅಭಿಪ್ರಾಯಪಡುವುದರೊಂದಿಗೆ ಕಮ್ಯುನಿಸ್ಟರು ಪ್ರತಿಯೊಂದು ಭಾರತೀಯ ಭಾಷೆಯ ಅಭಿವೃದ್ಧಿಯನ್ನು ಬಯಸುತ್ತಾರೆ. ಆದ್ದರಿಂದ ಕಪ್ಪುಬಣ್ಣ ಬಳಿಯುವ ಈ ಸಾಮ್ರಾಜ್ಯವಾದಿಗಳ ತಂತ್ರವು ವಾಸ್ತವವಾಗಿ ನಮ್ಮ ಮುಖಕ್ಕೆ ಮಸಿಬಳಿಯುವ ತಂತ್ರವಾಗಿದೆ. ನಮ್ಮ ದೇಶದ ಐಕ್ಯವನ್ನು ಮುರಿಯುವ ಈ ಸಾಮ್ರಾಜ್ಯಶಾಹೀ ಕುತಂತ್ರವನ್ನು ನಾವು ನೋಡಲು ಸಮರ್ಥರಾಗಿರಬೇಕು.

ಮತೀಯ ಆಧಾರದ ಮೇಲೂ ಜನರನ್ನು ವಿಭಾಗಿಸುವ ತಮ್ಮ ಕೃತ್ಯವನ್ನು ಸಾಮ್ರಾಜ್ಯಶಾಹಿಗಳು ವಿಸ್ತೃತಗೊಳಿಸಿದ್ದಾರೆ. ಬುಡಕಟ್ಟು ಜನರನ್ನು ಮತಾಂತರಗೊಳಿಸುವಲ್ಲಿ ವಿದೇಶಿ ಕ್ರಿಶ್ಚಿಯನ್ ಮಿಷನರಿಗಳ ಪಾತ್ರವನ್ನು ಕೆಲದಿನ ನೋಡಿದ್ದಾಯಿತು. ಉತ್ತರ ಪೂರ್ವ ರಾಜ್ಯಗಳಲ್ಲಿ ಪ್ರತ್ಯೇಕತಾವಾದಿ ಚಳುವಳಿಯನ್ನು ಹುಟ್ಟುಹಾಕುವಲ್ಲಿ, ತ್ರಿಪುರಾದಲ್ಲಿ ಹಿಂಸೆಯನ್ನು ಪ್ರಚೋದಿಸುವಲ್ಲಿ ಅವರ ಹೇಯ ಪಾತ್ರ ಬಯಲಿಗೆ ಬಿದ್ದಿದೆ.

ತಮ್ಮ ಏಜೆಂಟರಿಗೆ ಎಡಪಂಥೀಯ ಮುಖವಾಡ ಹಾಕುವುದನ್ನು ಸಾಮ್ರಾಜ್ಯಶಾಹಿಗಳು ಕಲಿಸಿದ್ದಾರೆ. ಸಾಮ್ರಾಜ್ಯವಾದಿಗಳಿಂದ ನಿಯಮಿತರಾದ ಏಜೆಂಟರು, ಮಿಷನರಿಗಳು ಎಡಪಂಥೀಯರ ಸಾಮೂಹಿಕ ಸಂಘಟನೆಗಳಲ್ಲಿ ತೂರಿಕೊಳ್ಳುತ್ತಿದ್ದಾರೆ. ಭೂಮಾಲೀಕ ಬಂಡವಾಳಿಗರ ದುರಾಡಳಿತದಲ್ಲಿ ಬಳಲಿದ ಜನರಿಗೆ ಸಹಾಯ ಸಲ್ಲಿಸಿ ಪ್ರತ್ಯೇಕತಾ ಚಳುವಳಿಗೆ ಅವರನ್ನು ಸಿದ್ಧಗೊಳಿಸುತ್ತಾರೆ. ನಮ್ಮ ದೇಶ ಈವರೆಗೆ ಮೂರು ಪ್ರತ್ಯೇಕ ರಾಷ್ಟ್ರಗಳಾಗಿ ವಿಭಜನೆಗೊಂಡಿದೆ. ಅಸ್ಸಾಂ ಮತ್ತಿತರ ಉತ್ತರ ಪೂರ್ವ ರಾಜ್ಯಗಳಲ್ಲಿ ಮಿಷನರಿಗಳು ಸಫಲರಾಗಿದ್ದರೆ ಅವರು ಕಚ್ಚಾ ತೈಲದ ಸರಬರಾಜನ್ನು ನಿಲ್ಲಿಸುವದಕ್ಕಿಂತ ಮುಂದೆ ಹೋಗಿರುತ್ತಿದ್ದರು. ಮತ್ತೊಂದು ರಾಷ್ಟ್ರವನ್ನೇ ಅವರು ನಿರ್ಮಿಸುವದರಲ್ಲಿದ್ದರು. ಸಾಮ್ರಾಜ್ಯಶಾಹಿಗಳ ಕೈಗೊಂಬೆಗಳು ಎಲ್ಲಾ ಕಡೆಯಲ್ಲೂ ಕಾರ್ಯಮಗ್ನರಾಗಿದ್ದಾರೆ. ನಮ್ಮ ನಗರಗಳಲ್ಲೇ ಅವರನ್ನು ಪತ್ತೆ ಹಚ್ಚುವದು ಸೂಕ್ಷ್ಮದೃಷ್ಟಿಯುಳ್ಳ ಯಾರಿಗಾದರೂ ಸಾಧ್ಯ. ಎಲ್ಲ ಕ್ರಿಶ್ಚಿಯನ್ ಮಿಷನರಿಗಳನ್ನೂ ಏಜೆಂಟರೆಂದು ಕರೆದು ಮತ್ತೊಂದು ತಪ್ಪನ್ನು ನಾವು ಮಾಡದಿರೋಣ. ಸೇವೆ ಸಲ್ಲಿಸುತ್ತಿರುವ ಕೆಲವು ಮಿಷನರಿಗಳಿಗೆ ನಾವು ಏಜೆಂಟರೆನ್ನುವದು ಬೇಡ. ಇಲ್ಲಿ ವಾಸವಾಗುವದಕ್ಕೆ ತಮ್ಮ ಧಾರ್ಮಿಕ ಅಭಿಪ್ರಾಯವನ್ನು ಪ್ರಚಾರಪಡಿಸುವದಕ್ಕೆ ಅವರಿಗೂ ಹಕ್ಕಿದೆ. ಅದನ್ನು ನಾವು ಗೌರವಿಸೋಣ. ಆದರೆ ಸಾಮ್ರಾಜ್ಯವಾದಕ್ಕಾಗಿ ಜನರನ್ನು ಭ್ರಷ್ಟರನ್ನಾಗಿ ಮಾಡುವ ಸಂಘಟನೆಗಳನ್ನು ನಾವು ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕು. ಜನತೆಯ ಕಷ್ಟಗಳಿಗೆ ಸಹಾಯ ಮಾಡಲು ಮಾತ್ರ ಸಾಮ್ರಾಜ್ಯವಾದಿಗಳು ಹಣಕಾಡುವದಿಲ್ಲ. ಜನತಾ ಚಳುವಳಿಗಳ ಮೇಲೆ ಹಿಡಿತ ಸ್ಥಾಪಿಸಲು ಅವರು ಇದನ್ನು ಮಾಡುತ್ತಾರೆ. ಚರ್ಚಿನ ಒಂದು ಗುಂಪನ್ನು ರಾಷ್ಟ್ರೀಕರಣ ಮಾಡಬೇಕೆಂದ ತಕ್ಷಣ ಕೆಲವು ಧಾರ್ಮಿಕ ಬೋಧಕರು ಸಾಮ್ರಾಜ್ಯವಾದಿಗಳು ಏಜೆಂಟರಾಗಲು ತಕ್ಷಣ ದೊರಕುತ್ತಾರೆ.

ಅದೇ ರೀತಿ ಇಸ್ಲಾಂ ದುರಭಿಮಾನಿಗಳ ಜೊತೆಗೂ ಕೂಡ ಸಾಮ್ರಾಜ್ಯವಾದಿಗಳು ಕೈಮಿಲಾಯಿಸಿದ್ದಾರೆ. ಪೆಟ್ರೋ ಡಾಲರ್ (Petro Dollor) ದೇಶದೊಳಗೆ ವಿಪರೀತವಾಗಿ ಹರಿದು ಬರುತ್ತಿದೆ. ಅಧಿಕಾರದಲ್ಲಿರುವ ಮತ್ತು ಇರದಿರುವ ರಾಜಕಾರಣಿಗಳು ಈ ಪೆಟ್ರೋಡಾಲರ್ ದೊರೆಗಳೊಂದಿಗೆ ಚಕ್ಕಂದವಾಡುತ್ತಿದ್ದಾರೆ. ಹರಿಜನರನ್ನು ಮುಸ್ಲಿಂರನ್ನಾಗಿ ಮತಾಂತರಗೊಳಿಸುವ ಇತ್ತೀಚಿನ ಪ್ರವೃತ್ತಿ ಇದರಿಂದಲೇ ಪ್ರಚೋದಿತವಾಗಿದೆ. ಭಾರತದಲ್ಲಿ ಇಸ್ಲಾಂ ರಾಷ್ಟ್ರವನ್ನು ಹುಟ್ಟುಹಾಕುವ ಒಂದು ಕಾರ್ಯದಲ್ಲಿ ಇಸ್ಲಾಂ ರಾಷ್ಟ್ರ ಹಾಗೂ ಮೂಲಭೂತವಾದಿಗಳು ವಿದೇಶಿಯರ ಜೊತೆ ಶಾಮೀಲಾಗಿದ್ದಾರೆ. ಸೌದಿ ಅರೇಬಿಯಾದಿಂದ, ಅರಬ್ ದೇಶದಲ್ಲೂ (ಎಮಿರೇಟ್ಸ್) ಇರಾನ್ ಮುಖಾಂತರ ಪಾಕಿಸ್ತಾನಕ್ಕೂ, ಭಾರತದ ಮುಖಾಂತರ ಬಾಂಗ್ಲಾದೇಶಕ್ಕೂ ಮತ್ತು ಮಲಯಾ ಮುಖಾಂತರ ಇಂಡೋನೇಷಿಯಾ ಹಾಗೂ ಫಿಲಿಫೈನ್ಸ್-ಈ ಸರಣಿಯಲ್ಲಿ ಇಸ್ಲಾಂ ಮೂಲಭೂತ ತತ್ವವನ್ನು ಹರಡುವದರಲ್ಲಿ ಸನ್ನದ್ಧರಾಗಿದ್ದಾರೆ. ಬೆಂಗಳೂರಿನ ಸುತ್ತಮುತ್ತಲಿನ ಹರಿಜನರನ್ನು ಮತಾಂತರಗೊಳಿಸುವದಕ್ಕೆಂದು 12ಲಕ್ಷದಷ್ಟು ಹಣವನ್ನು ಕೇಳಿ ದೆಹಲಿಯ ಶಾಹಿ ಇಮಾಂರಿಗೆ ಪತ್ರ ಬರೆದ ಖೊಟ್ಟಿ (Bogus) ಸಂಸ್ಥೆಯೊಂದನ್ನು ದಿನಾಂಕ 7-8-81ರ ಡೆಕ್ಕನ್‌ಹೆರಾಲ್ಡನ ವರದಿಯು ಬಯಲಿಗೆಳೆದಿದೆ. ಸಾಮ್ರಾಜ್ಯಶಾಹಿಗಳಿಂದ ಸಹಾಯ ಪಡೆಯುವ ಮುಸ್ಲಿಂ ದುರಭಿಮಾನಿಗಳು ಸಾಮಾಜಿಕವಾಗಿ ಶೋಷಿತರಾದ ದಲಿತರ ಒಂದು ಗುಂಪನ್ನು ಸೆಳೆದುಕೊಳ್ಳಲು ಸಾಧ್ಯವಾಗಿದೆ ಎನ್ನುವುದೇ ಸ್ವಧರ್ಮೀಯರೊಂದಿಗೆ ಸಮಾನ ರೀತಿಯಲ್ಲಿ ನಡೆದುಕೊಳ್ಳಲು ಅವಕಾಶ ಕೊಡದ ಹಿಂದೂ ದುರಭಿಮಾನಿಗಳು ಕೂಡ ಸಾಮ್ರಾಜ್ಯವಾದಿಗಳ ಕುತಂತ್ರದ ಇನ್ನೊಂದು ಅಂಗವಾಗಿದ್ದಾರೆಂದು ಖಂಡಿತ ಸಿದ್ಧಪಡಿಸುತ್ತದೆ.

ಅನೇಕ ಕಡೆಗಳಲ್ಲಿ ಬ್ರಹ್ಮಕುಮಾರಿ ಸಂಸ್ಥೆಯವರು ತಮ್ಮ ಶಾಖೆಗಳನ್ನು ತೆರೆಯುತ್ತಿರುವುದು, ಅಮೇರಿಕನ್ ಮಾದರಿಯ ಭಕ್ತ ಪಂಥವನ್ನು ಎಲ್ಲ ಕಡೆ ಹರಡುತ್ತಿರುವ ಹರೇಕೃಷ್ಣ ಪಂಥದ ವಿಸ್ತರಣೆ, ವಿದೇಶಿ ಚೇಲಾಗಳನ್ನು ಹೊಂದಿರುವ ಬಾಬಾಗಳು ನಾಯಿಕೊಡೆಗಳಂತೆ ಹುಟ್ಟುತ್ತಿರುವುದು, ಇವೆಲ್ಲ ಸಾಮ್ರಾಜ್ಯಶಾಹಿಗಳು ಹೇಗೆ ವಿವಿಧ ರೀತಿಯ ಮತೀಯವಾದಿಗಳನ್ನು ಹುಟ್ಟುಹಾಕುತ್ತಿರುವರೆಂದು ತೋರಿಸುತ್ತದೆ. ಇದೆಲ್ಲವೂ ಸಾಲದೆಂಬಂತೆ ಸಿಖ್‌ರು ಖಲೀಸ್ತಾನದ ಕೂಗನ್ನೆತ್ತಿದ್ದಾರೆ. ವಾಸ್ತವವಾಗಿ ಒಂದು ಗುಂಪಿನ ಜನರನ್ನು ಮತ್ತೊಂದು ಗುಂಪಿನ ವಿರುದ್ಧ ಎತ್ತಿಕಟ್ಟಿ ತೊಂದರೆಯನ್ನು ಹುಟ್ಟಿಸಲು ಪ್ರತಿಯೊಬ್ಬ ಮತೀಯವಾದಿಯೂ ದುಡ್ಡು ಪಡೆಯುತ್ತಾನೆ.

ಸ್ಥಳ ಕಾಯ್ದಿಡುವ ವಿಷಯವನ್ನೂ ಇದೇ ಮಾದರಿಯಲ್ಲಿ ಎತ್ತಲಾಗಿದೆ. ಗುಜರಾತ್ ಚಳುವಳಿಯು ಇದರ ಸ್ಪಷ್ಟ ಉದಾಹರಣೆ. ಹಿಂದುಳಿದ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸರಕಾರಿ ನೌಕರಿಗಳಲ್ಲಿ ಸ್ಥಳಕಾಯ್ದಿಡುವ ಪದ್ಧತಿಯಿಂದ ಹಿಂದೂ ಮತೀಯವಾದಿಗಳು ರೊಚ್ಚಿಗೆದ್ದಿದ್ದಾರೆ. ಒಬ್ಬ ಹರಿಜನರು ತಮ್ಮ ಮೇಲಧಿಕಾರಿಯಾಗುವುದನ್ನು ಹಿಂದೂ ದುರಭಿಮಾನಿಗಳು ಸಹಿಸದಾಗಿದ್ದಾರೆ. ಆದರೆ ಅದೇ ಅಧಿಕಾರಿ ಕ್ರಿಶ್ಚಿಯನ್ ಅಥವಾ ಮುಸ್ಲಿಂನಾಗಿದ್ದರೆ ಸಹಿಸುತ್ತಾರೆ. ಆದ್ದರಿಂದ ಹರಿಜನರು ಮುಸ್ಲಿಂರಾಗಿ ಮತಾಂತರ ಹೊಂದುತ್ತಿರುವ ಗಾಳಿ ಪ್ರಾರಂಭವಾಗಿದೆ.

ಈ ಸಂಬಂಧದಲ್ಲೇ ಗುಜರಾತಿನಲ್ಲಿ ನಡೆಸಲಾದ ಸಾಮೂಹಿಕ ಕಗ್ಗೊಲೆಗಳು ಸಾಮ್ರಾಜ್ಯವಾದಿಗಳ ಮೋಸಗಾರಿಕೆಗೆ ಸಹಾಯಕವಾಗುತ್ತಿವೆ. ಸಾಮ್ರಾಜ್ಯವಾದಿಗಳ ಏಜೆಂಟರು ಸ್ಥಳ ಕಾಯ್ದಿಡುವುದರ ವಿರುದ್ಧ ನಡೆವ ಚಳುವಳಿಗೆ ಸಹಾಯ ಮಾಡುವುದು ಕಂಡುಬಂದಿದೆ.

ರಾಜಕೀಯದಲ್ಲೂ ಕೂಡ ತೀವ್ರಗಾಮಿಗಳನ್ನೂ ಸಾಮ್ರಾಜ್ಯಶಾಹಿಗಳು ಪ್ರಚೋದಿಸುತ್ತಿದ್ದಾರೆ. ಸಮಾಜ

[6ನೇ ಪುಟ ನೋಡಿ]

ಸಮಾಜವಾದೀ ಪೋಲಂಡಿನ ವಿದ್ಯಮಾನಗಳು

ಫ್ಯಾಸಿಸಂನಿಂದ ವಿಮೋಚನೆ ಪಡೆದುದರ 37ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಸಮಾಜವಾದೀ ಪೋಲಂಡ್ ಕಳೆದ ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯದಿಂದ ಒಂದು ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಅದು 36 ವರ್ಷಗಳಲ್ಲಿ ಸಮಾಜವಾದದ ಮಾರ್ಗದಲ್ಲಿ ಪೋಲಂಡ್ ಬೆವರುಸುರಿಸಿ ಸಾಧಿಸಿದ ಯಶಸ್ಸನ್ನು ಅಪಾಯದ ಅಂಚಿಗೆ ತಳ್ಳಿರುವುದು ಮಾತ್ರವಲ್ಲ ಯೂರೋಪಿನ ಸಮಾಜವಾದೀ ಸಮುದಾಯದ ಭದ್ರತೆಗೂ ಧಕ್ಕೆ ತರುತ್ತಿದೆ.

ಸಮಾಜವಾದೀ ಸಮಾಜವನ್ನು ಕಟ್ಟುವಾಗ ಪೋಲಂಡಿನ ಈ ಹಿಂದಿನ ನಾಯಕತ್ವ ಮಾಡಿದ ತಪ್ಪುಗಳು, ವಿಶೇಷವಾಗಿ ಸೈದ್ಧಾಂತಿಕ ಮತ್ತು ಆರ್ಥಿಕ ರಂಗಗಳಲ್ಲಿ ಇಟ್ಟ ತಪ್ಪು ಹೆಜ್ಜೆಗಳ ದುರ್ಲಾಭಪಡೆದ ಪೋಲಂಡಿನೊಳಗಿನ ಪ್ರತಿಕ್ರಾಂತಿಯ ಶಕ್ತಿಗಳು ಸಮಾಜವಾದೀ ದೇಶಗಳಲ್ಲಿ ಬುಡಮೇಲು ಕೃತ್ಯಗಳನ್ನು ನಡೆಸುವ ವಿದೇಶಿ ಕೇಂದ್ರಗಳ ಸಹಾಯದಿಂದ ಬಿಕ್ಕಟ್ಟು ಗಂಭೀರ ರೂಪ ತಳೆಯುವಂತೆ ಮಾಡಿವೆ. ಸಮಾಜವಾದೀ ಪೋಲಂಡಿನ ಒಳಿತನ್ನು ಬಯಸುವ ಎಲ್ಲಾ ಕಮ್ಯುನಿಸ್ಟರಿಗೆ ತೀವ್ರ ಕಳವಳವನ್ನುಂಟುಮಾಡಿರುವ ಈ ಬಿಕ್ಕಟ್ಟು ಸ್ವಾಭಾವಿಕವಾಗಿಯೇ ಕುರುಡು ಕಮ್ಯುನಿಸ್ಟ್ ವಿರೋಧಿಗಳಿಗೆ, ಪ್ರತಿಕ್ರಾಂತಿ ನಡೆಸುವುದರಲ್ಲಿ ಕುಖ್ಯಾತರಾದವರಿಗೆ ಹಾಗೂ ಸಾಮ್ರಾಜ್ಯವಾದಿಗಳಿಗೆ ಬಹಳ ಸಂತಸವನ್ನುಂಟುಮಾಡಿದೆ.

ಈ ಕಾಲದಲ್ಲಿ ಜಾಗತಿಕ ಸಾಮ್ರಾಜ್ಯಶಾಹಿ ಆಂತರಿಕ ಕ್ರಾಂತಿಕಾರಿಯ ಶಕ್ತಿಗಳ ಸಹಾಯದಿಂದ ಸಮಾಜವಾದೀ ಸಮುದಾಯಕ್ಕೆ ಹಾಗೂ ಸೋವಿಯೆಟ್ ಸಂಘಕ್ಕೆ ನೇರ ಸವಾಲು ಹಾಕುತ್ತಿದೆಯೆಂಬುದು ಎಲ್ಲರಿಗೂ ಗೊತ್ತು. ಇಂತಹ ಸನ್ನಿವೇಶದಲ್ಲಿ ಎರಡೇ ಆಯ್ಕೆಯಿರಲು ಸಾಧ್ಯ. ಒಂದು, ಸಾಮ್ರಾಜ್ಯಶಾಹಿಯ ಹಾಗೂ ಪ್ರತಿಕ್ರಾಂತಿಯ ತತ್ವಗಳಿಗೆ ತಲೆಬಾಗಿ ಪೋಲಂಡಿನ ಸಮಾಜವಾದವನ್ನು ನಾಶಮಾಡಿ ತಮ್ಮ ಆಕ್ರಾಮಕ ಹಸಿವನ್ನು ಹಿಂಗಿಸಿಕೊಳ್ಳಲು ಅವಕ್ಕೆ ಅವಕಾಶ ಕೊಡುವುದು. ಎರಡನೇಯದು, ಯುದ್ಧ ಮತ್ತು ಆಕ್ರಮಣದ ಈ ಕರಾಳ ಶಕ್ತಿಗಳಿಗೆ ಮುಖಕ್ಕೆ ಹೊಡೆದಂತೆ ಉತ್ತರಕೊಡಲು ಪೋಲಂಡಿನ ಹೋರಾಟಗಾರ ಕಮ್ಯುನಿಸ್ಟರಿಗೆ ಸಮಾಜವಾದೀ ಸಮುದಾಯ ಮತ್ತು ಸೋವಿಯೆಟ್ ಸಂಘ ಬೆಂಬಲವಾಗಿ ನಿಲ್ಲುವುದು. ಇದನ್ನು ಬಿಟ್ಟು ನಾವು 'ತಟಸ್ಥ'ರಾಗಿರುತ್ತೇವೆನ್ನುವುದು ಶುದ್ಧ ಗೋಸುಂಬೆತನ ಎಂದು ಇತಿಹಾಸ ಬಲ್ಲವರಿಗೆ ಬೇರೆ ಹೇಳಬೇಕಾಗಿಲ್ಲ: ಇಂತಹ ಗೋಸುಂಬೆ 'ತಾಟಸ್ಥ್ಯ'ವೇ ಅಲ್ಲವೇ ಸ್ಪೈಯಿನ್‌ನಲ್ಲಿ ಫ್ರಾಂಕೋನ ಫ್ಯಾಸಿಸಂನ ಉದಯಕ್ಕೆ ಅವಕಾಶಕೊಟ್ಟಿದ್ದು, ಮ್ಯೂನಿಕ್ ದ್ರೋಹಕ್ಕೆ ಕಾರಣವಾದದ್ದು, ಇಥಿಯೋಪಿಯಾವನ್ನು ಮುಸೋಲಿನಿ, ಚೀನದ ವಿಸ್ತೃತ ಭಾಗಗಳನ್ನು ಜಪಾನ್ ಆಕ್ರಮಿಸಿಕೊಂಡಾಗ ಅದನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿ, ಸೋವಿಯೆಟ್ ಸಂಘದ ಮೇಲೆ ಫ್ಯಾಸಿಸ್ಟ್ ಜರ್ಮನಿ, ಜಪಾನ್ ಹಾಗೂ ಇಟೆಲಿಯ ಕೂಟಕ್ಕೆ ಪ್ರೋತ್ಸಾಹ ನೀಡಿ ಸಾಮ್ರಾಜ್ಯಶಾಹಿಗಳು ಹಾಗೂ ಫ್ಯಾಸಿಸ್ಟರನ್ನು ಸಂತುಷ್ಟಗೊಳಿಸಿದುದರ ಪರಿಣಾಮವಾಗಿಯೇ ಅಲ್ಲವೇ ಜಗತ್ತು ಫ್ಯಾಸಿಸಂನ ವಿನಾಶಕಾರೀ ಆಪತ್ತನ್ನು ಎದುರಿಸಬೇಕಾಗಿ ಬಂದದ್ದು? ಈ ಎಲ್ಲಾ ಐತಿಹಾಸಿಕ ತಥ್ಯಗಳು ಇಂತಹ ಸನ್ನಿವೇಶಗಳಲ್ಲಿ 'ತಟಸ್ಥ'ರಾಗಿರುವುದರ ವಿನಾಶಕಾರೀ ಪರಿಣಾಮದ ಬಗ್ಗೆ ನಮಗೆ ಎಚ್ಚರಿಕೆಕೊಡುತ್ತವೆ. ಈ ದೃಷ್ಟಿಯಲ್ಲಿ ಸೋವಿಯೆಟ್ ಸಂಘ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಎಸ್.ಯು.)ದ ಕೇಂದ್ರಸಮಿತಿ ಪೋಲಂಡ್ ಸಂಯುಕ್ತ ಕಾರ್ಮಿಕರ ಪಕ್ಷ (ಪಿ.ಯು.ಡಬ್ಲ್ಯು.ಪಿ)ದ ಕೇಂದ್ರಸಮಿತಿಗೆ ಬರೆದ ಬಹಿರಂಗ ಪತ್ರದಲ್ಲಿ ಮಾಡಲಾದ ವಿಶ್ಲೇಷಣೆ ಸಮಾಜವಾದೀ ಪೋಲಂಡಿನ ಹಿತೈಷಿಗಳೆಲ್ಲರೂ ಒಪ್ಪತಕ್ಕಂತಹವುಗಳು.

100 ವರ್ಷಗಳಿಗಿಂತಲೂ ಹೆಚ್ಚು ಕಾಲ ಜಗತ್ತಿನ ಮೂರರಲ್ಲಿ ಎರಡು ಭಾಗವನ್ನು ತನ್ನ ಗುಲಾಮಗಿರಿಯಲ್ಲಿ ಬಂಧಿಸಿಟ್ಟ ಸಾಮ್ರಾಜ್ಯಶಾಹೀ ಶಕ್ತಿಗಳು ಪೋಲಂಡಿನ ಬಿಕ್ಕಟ್ಟಿನ ದುರ್ಲಾಭ ಪಡೆದು ತಮ್ಮನ್ನು ಪೋಲಂಡಿನ ಸ್ವಾತಂತ್ರ್ಯದ ಬೆಂಬಲಿಗರೆಂದೂ ಸಮಾಜವಾದೀ ಸಮುದಾಯ ಹಾಗೂ ಸೋವಿಯೆಟ್ ಸಂಘವನ್ನು ರಾಷ್ಟ್ರೀಯ ಸ್ವಾತಂತ್ರ್ಯ ಹಾಗೂ ಸಮಗ್ರತೆಯ ವಿರೋಧಿಗಳೆಂದೂ ಬಣ್ಣಿಸುವುದು ದುರಹಂಕಾರದ ಪರಮಾವಧಿ. ಎರಡನೇ ಮಹಾಯುದ್ಧದ ನಂತರ ಅಮೇರಿಕಾ, ಬ್ರಿಟಿಷ್, ಫ್ರೆಂಚ್, ಡಚ್, ಪೋರ್ಚುಗೀಸ್ ಹಾಗೂ ಇತರ ಸಾಮ್ರಾಜ್ಯಶಾಹಿಗಳು ಸಣ್ಣದೊಡ್ಡ ದೇಶಗಳ ಮೇಲೆ 30-35 ಆಕ್ರಮಣ ನಡೆಸಿದುದನ್ನು ರಾಜಕೀಯ ಪ್ರಾಥಮಿಕ ಜ್ಞಾನವಿರುವವರು ಯಾರೂ ಮರೆಯಲಾರರು. ಕೊರಿಯಾ, ವಿಯೆಟ್ನಾಂ, ಈಜಿಪ್ಟ್, ಆಲ್ಜೀರಿಯಾ, ಇಂಡೋನೇಷ್ಯಾ, ಕಾಂಗೋ, ಡೊಮಿನಿಕನ್ ಗಣರಾಜ್ಯ, ಚಿಲಿ ಹಾಗೂ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ಇನ್ನೂ ಹಲವಾರು ದೇಶಗಳ ರಾಷ್ಟ್ರೀಯ ಸ್ವಾತಂತ್ರ್ಯವನ್ನು ನಾಶಮಾಡಲು ಇದೇ ಸಾಮ್ರಾಜ್ಯಶಾಹಿಗಳು ಶತಪ್ರಯತ್ನ ನಡೆಸಿದ್ದು ಯಾರಿಗೆ ತಾನೇ ಗೊತ್ತಿಲ್ಲ? ಕಮ್ಯುನಿಸ್ಟ್ ವಿರೋಧದ ಭಾವನೆಗಳಿಂದ ಕುರುಡಾದವರು ಇದನ್ನು ಮರೆಯಬಹುದಾದರೂ, ನೂರುವರ್ಷಗಳಿಗಿಂತಲೂ ಹೆಚ್ಚು ಸಮಯದಿಂದ ಜಗತ್ತನ್ನೇ ನಡುಗಿಸಿದ ಸಾಧನೆಗಳನ್ನು ಹೊಂದಿರುವ, ಯುದ್ಧ ಹಾಗೂ ಆಕ್ರಮಣದ ಶಕ್ತಿಗಳ ವಿರುದ್ಧ ಶಾಂತಿ, ಪ್ರಗತಿ ಹಾಗೂ ಸಮಾಜವಾದದ ಏಕೈಕ ಆಸರೆಯಾದ ಕಾರ್ಮಿಕರ ಸಮಾಜವಾದೀ ಕ್ರಾಂತಿಗಳನ್ನು ರಕ್ಷಿಸುವುದು ಎಲ್ಲಾ ದೇಶಗಳ ಕಾರ್ಮಿಕವರ್ಗದ, ಕ್ರಾಂತಿಕಾರಿಗಳ, ಎಲ್ಲಾ ಸಮಾಜವಾದೀ ಪ್ರಭುತ್ವಗಳ ಹಾಗೂ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಕರ್ತವ್ಯ.

ಸ್ವಲ್ಪ ತಡವಾಗಿಯಾದರೂ ಸರಿಯಾದ ವಿಶ್ಲೇಷಣೆಯುಳ್ಳ ಸಿ.ಪಿ.ಎಸ್.ಯು.ನ ಬಹಿರಂಗಪತ್ರದ ಕೆಲವು ಅಂಶಗಳನ್ನು ಹಾಗೂ ಇತ್ತೀಚೆಗೆ ಮುಕ್ತಾಯವಾದ ಪಿ.ಯು.ಡಬ್ಲ್ಯು.ಪಿ.ನ ಒಂಭತ್ತನೇ ವಿಶೇಷ ಸಮ್ಮೇಳನಕ್ಕೆ ಸಲ್ಲಿಸಿದ ಪ್ರಧಾನಕಾರ್ಯದರ್ಶಿ ಸ್ಟಾನಿಸ್ಲಾವ್ ಕಾನಿಯಾರವರ ವರದಿಯ ಕೆಲವು ಅಂಶಗಳನ್ನೂ ಈ ಮುಂದೆ ಕೊಡಲಾಗಿದೆ. ಇತ್ತೀಚಿನ ಸುದ್ದಿಗಳ ಪ್ರಕಾರ ಈ ಸಮ್ಮೇಳನ ಅಂಗೀಕರಿಸಿದ ಮಾರ್ಗ ಪ್ರತಿಕ್ರಾಂತಿ ಶಕ್ತಿಗಳ ಉತ್ಸಾಹವನ್ನು ಹಾಗೂ ಸಂತಸವನ್ನು ಕುಗ್ಗಿಸಿವೆಯೆಂದು ತಿಳಿದುಬಂದಿದೆ. ಈ ವಿಶೇಷ ಸಮ್ಮೇಳನ ವಿಸ್ತೃತ ಕಾರ್ಯಚಟುವಟಿಕೆಗಳ ತಳಪಾಯ ಹಾಕಿಕೊಟ್ಟು ಹೊಸ ನಾಯಕತ್ವ ಈ ದೀರ್ಘ ರಾಜಕೀಯ ಹಾಗೂ ಆರ್ಥಿಕ ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸಿ ಪಿ.ಯು.ಡಬ್ಲ್ಯು.ಪಿ.ಯನ್ನು ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಆಧಾರದ ಮೇಲೆ ಬಲಗೊಳಿಸಿ ಪೋಲಂಡ್ ಜನತಾ ಗಣರಾಜ್ಯದ ಸಮಾಜವಾದೀ ವ್ಯವಸ್ಥೆಯನ್ನು ಸುದೃಢಗೊಳಿಸುವುದೆಂದು ಜಗತ್ತಿನ ಎಲ್ಲಾ ಕಮ್ಯುನಿಸ್ಟರ ಹಾರೈಕೆ.

ಸೋವಿಯೆಟ್ ಸಂಘ ಕಮ್ಯುನಿಸ್ಟ್ ಪಕ್ಷದ ಪತ್ರದ ಸಾರಾಂಶ

ಪ್ರಿಯ ಸಂಗಾತಿಗಳೇ,

ಪೋಲಂಡ್‌ನ ಸಮಾಜವಾದ ಹಾಗೂ ಪೋಲಂಡ್‌ನ ಸ್ವತಂತ್ರ ಪ್ರಭುತ್ವದ ಭವಿಷ್ಯದಬಗ್ಗೆ ತೀವ್ರ ಆತಂಕಕ್ಕೊಳಗಾಗಿರುವುದರಿಂದ ಸೋವಿಯೆಟ್ ಸಂಘ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಎಸ್.ಯು.)ದ ಕೇಂದ್ರಸಮಿತಿ ನಿಮಗೆ ಈ ಪತ್ರ ಬರೆಯುತ್ತಿದೆ.

ಸೋವಿಯೆಟ್ ಹಾಗೂ ಪೋಲಂಡ್‌ನ ಕಮ್ಯುನಿಸ್ಟರು ಹೆಗಲಿಗೆ ಹೆಗಲು ಕೊಟ್ಟು ನಾಝಿಗಳ ವಿರುದ್ಧ ಹೋರಾಡಿದ್ದರು ಹಾಗೂ ಯುದ್ಧಾನಂತರ ಸದಾ ಒಟ್ಟಿಗೇ ಇದ್ದೇವೆ. ನಮ್ಮ ಪಕ್ಷ, ಸೋವಿಯೆಟ್ ಜನತೆ ಪೋಲಂಡಿನ ಸಂಗಾತಿಗಳಿಗೆ ಹೊಸ ಜೀವನವನ್ನು ನಿರ್ಮಿಸಲು ಸಹಾಯ ಮಾಡಿದವು. ಆದ್ದರಿಂದ ಪೋಲಂಡಿನ ಜನತೆಯ ಕ್ರಾಂತಿಕಾರಿ ಸಾಧನೆಗಳಿಗೆ ತೀವ್ರ ಅಪಾಯವೊದಗಿರುವಾಗ ಆತಂಕಪಡದಿರಲು ಸಾಧ್ಯವಿಲ್ಲ.

ನಾವು ಹೇಳುವುದನ್ನು ನೇರವಾಗಿ ಹೇಳುತ್ತೇವೆ. ಪೋಲಂಡ್ ಜನತಾ ಗಣತಂತ್ರದಲ್ಲಿನ ಕೆಲವು ಪ್ರವೃತ್ತಿಗಳ ಹಾಗೂ ಹಿಂದಿನ ನಾಯಕತ್ವದ ಧೋರಣೆಗಳ ಬಗ್ಗೆ ನಾವು ಆತಂಕಗೊಂಡಿದ್ದೆವು. ನಮ್ಮ ನಡುವಿನ ಸೋದರ ಸಂಬಂಧಗಳಿಗೊಪ್ಪುವಂತೆ ಅದನ್ನು ಬೇರೆಬೇರೆ ಸಂದರ್ಭಗಳಲ್ಲಿ ಹೇಳಿಯೂ ಇದ್ದೆವು. ಪೋಲಂಡ್ ಸಂಯುಕ್ತ ಕಾರ್ಮಿಕರ ಪಕ್ಷ (ಪಿ. ಯು. ಡಬ್ಲ್ಯು. ಪಿ.)ದೊಳಗೂ ಈ ರೀತಿಯ ತೀವ್ರ ಟೀಕೆ ಬಂದಿತ್ತು. ಆದರೆ ಇವೆಲ್ಲವನ್ನೂ ನಿರ್ಲಕ್ಷಿಸಿದ ಫಲವಾಗಿ ಪೋಲಂಡ್ ಈಗ ತೀವ್ರ ಬಿಕ್ಕಟ್ಟು ಎದುರಿಸಬೇಕಾಗಿ ಬಂದಿದೆ.

ಸಮಾಜವಾದೀ ನಿರ್ಮಾಣದಲ್ಲಿನ ಅಪಕ್ವ ತಪ್ಪುಗಳನ್ನು ಸರಿಪಡಿಸಿ ಜನತೆಯ, ವಿಶೇಷವಾಗಿ ಕಾರ್ಮಿಕ ವರ್ಗದ ಭರವಸೆಯನ್ನು ಮತ್ತೆಗಳಿಸಿ ಪಕ್ಷ ಸಮಾಜವಾದೀ ಪ್ರಜಾಪ್ರಭುತ್ವವನ್ನು ಬಲಗೊಳಿಸಬಹುದೆಂದು ನಾಯಕತ್ವದ ಬದಲಾವಣೆಯಾದಾಗ ನಾವು ಭಾವಿಸಿದ್ದೆವು. ಆದರೆ ಹಾಗಾಗಲಿಲ್ಲ. ಸಮಾಜವಾದ ವಿರೋಧಿ ಶಕ್ತಿಗಳಿಗೆ ಕೊನೆಯಿಲ್ಲದಂತೆ ಕೊಟ್ಟ ರಿಯಾಯ್ತಿಗಳಿಂದಾಗಿ ಪಿ. ಯು. ಡಬ್ಲ್ಯು. ಪಿ. ಸಾಮ್ರಾಜ್ಯಶಾಹಿ ಬುಡಮೇಲುಗಾರರ ಕೇಂದ್ರಗಳ ಸಹಾಯ ಪಡೆದ ಆಂತರಿಕ ಪ್ರತಿಕ್ರಾಂತಿ ಶಕ್ತಿಗಳ ಹೊಡೆತವೆದುರು ಹೆಜ್ಜೆ-ಹೆಜ್ಜೆಯಾಗಿ ಹಿಂಜರಿಯುತ್ತಾ ಹೋಯಿತು.

ಪೋಲಂಡಿನ ಸ್ವಾತಂತ್ರ್ಯದ ಪ್ರಶ್ನೆ

ಪರಿಸ್ಥಿತಿ ಈಗ ಗಂಭೀರವಾಗಿದೆ ಮಾತ್ರವಲ್ಲ. ದೇಶವನ್ನು ಅಪಾಯದ ಅಂಚಿನಲ್ಲಿ ತಂದಿರಿಸಿದೆ. ಹೀಗಲ್ಲದೆ ಬೇರೆ ಯಾವ ರೀತಿಯಲ್ಲೂ ಸ್ಥಿತಿಯನ್ನು ವಿಶ್ಲೇಷಿಸಲು ಸಾಧ್ಯವಿಲ್ಲ. ಪೋಲಂಡಿನ ಶತ್ರುಗಳು ತಮ್ಮ ನಿಜ ಉದ್ದೇಶವನ್ನು ಮುಚ್ಚುಮರೆಯಿಲ್ಲದೆ ಸ್ಪಷ್ಟಪಡಿಸುತ್ತಿದ್ದಾರೆ. ಒಂದಾದ ಮೇಲೊಂದರಂತೆ ಅವರು ತಮ್ಮ ಹತೋಟಿ ಬಲಪಡಿಸಿಕೊಳ್ಳುತ್ತಿದ್ದಾರೆ. 'ಸಾಲಿಡಾರಿಟಿ'ಯ ತೀವ್ರಗಾಮಿ ಗುಂಪನ್ನು ತಮ್ಮ ಆಯುಧವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಪೋಲಂಡಿನಲ್ಲಿ ಸಮಾಜವಾದಕ್ಕೆ ಒದಗಿರುವ ಕುತ್ತು ಪೋಲಂಡಿನ ಸ್ವತಂತ್ರ ಪ್ರಭುತ್ವಕ್ಕೇ ಒಂದು ಬೆದರಿಕೆ. ಸಮಾಜವಾದದ ಶತ್ರುಗಳು ಅಧಿಕಾರ ಕಿತ್ತುಕೊಳ್ಳುವುದರಲ್ಲಿ ಯಶಸ್ಸನ್ನೇನಾದರೂ ಪಡೆದರೆಂದರೆ, ಪೋಲಂಡ್ ಸಮಾಜವಾದೀ ಸಮುದಾಯದ ರಕ್ಷಣೆಯಿಂದ ವಂಚಿತವಾಯಿತೆಂದರೆ ಸಾಮ್ರಾಜ್ಯಶಾಹಿಗಳ ಆಶೆಬುರುಕ ಕೈಗಳು ಕೂಡಲೇ ಅದನ್ನು ಬಾಚಿಕೊಳ್ಳುತ್ತವೆ. ಆಗ ಒಂದು ಪ್ರಭುತ್ವವಾಗಿ ಪೋಲಂಡಿನ ಸ್ವಾತಂತ್ರ್ಯ, ಪರಮಾಧಿಕಾರ ಹಾಗೂ ಗಡಿಗಳ ಭರವಸೆ ಯಾರು ತಾನೇ ಕೊಡಬಲ್ಲರು? ಯಾರೂ ಇಲ್ಲ.

ನಿಮಗೆ ಗೊತ್ತಿದೆ, ಸಂಗಾತಿಗಳೇ, ನಾವು ಹಲವು ಸಂದರ್ಭಗಳಲ್ಲಿ ಪೋಲಂಡಿನ ಪ್ರತಿಕ್ರಾಂತಿ ಶಕ್ತಿಗಳ ಹುಂಚಿಕೆಗಳ ಬಗ್ಗೆ ಹೇಳಿದ್ದೆವು. ಪಿ.ಯು.ಡಬ್ಲ್ಯು.ಪಿ. ಯಲ್ಲುಂಟಾದ ಅಸ್ತವ್ಯಸ್ತತೆಯನ್ನು ಹೋಗಲಾಡಿಸಿ ಪಕ್ಷದ ಕಾರ್ಯಕರ್ತರನ್ನು ಹಾಗೂ ಜನತೆಯ ಶಕ್ತಿಯ ರಕ್ಷಣೆಗೆ ದೃಢವಾಗಿ ನಿಲ್ಲಬೇಕೆಂಬುದರ ಬಗೆಯೂ ಹೇಳಿದ್ದೆವು. ಸಮೂಹ ಮಾಧ್ಯಮಗಳನ್ನು ಶತ್ರುಗಳು ತಮ್ಮ ಹತೋಟಿಗೊಳಪಡಿಸಿದುದರ ಬಗ್ಗೆ ಗಮನಸೆಳೆದು ಈ ಮಾಧ್ಯಮಗಳು ಪಿ.ಯು.ಡಬ್ಲ್ಯು.ಪಿ. ಪರವಾಗಿರದೆ, ಶತ್ರುಗಳ ಪರವಾಗಿದ್ದರೆ ಪಕ್ಷ ಯುದ್ಧವನ್ನು ಗೆಲ್ಲಲು ಸಾಧ್ಯವಿಲ್ಲವೆಂದೂ ಹೇಳಿದ್ದೆವು. ಸಾರ್ವಜನಿಕ ವ್ಯವಸ್ಥೆಯ ಅಂಗಗಳು ಹಾಗೂ ಸೈನ್ಯವನ್ನು ಪ್ರತಿಕ್ರಾಂತಿ ತತ್ವಗಳಿಂದ ರಕ್ಷಿಸಿ ಅವುಗಳ ಪ್ರತಿಷ್ಠೆಯನ್ನು ಬಲಪಡಿಸುವ ಪ್ರಶ್ನೆಯನ್ನೂ ಎತ್ತಲಾಗಿತ್ತು. ಸಂರಕ್ಷಣೆಯ ಅಂಗಗಳು, ಪ್ರಜಾಸೇನೆ ಹಾಗೂ ಸೇನೆಯ ಹೆಸರು ಕೆಡಿಸುವ ಪ್ರಯತ್ನಗಳಿಗೆ ಯಶಸ್ಸು ದೊರೆಯುವುದೆಂದರೆ ಸಮಾಜವಾದೀ ಪ್ರಭುತ್ವವನ್ನು ನಿರಾಯುಧಗೊಳಿಸಿ ಅದನ್ನು ವರ್ಗಶತ್ರುವಿನ ಅಧೀನಕ್ಕೆ ಬಿಟ್ಟಂತೆಯೇ. ಇವೆಲ್ಲದರ ಬಗ್ಗೆ ಸ್ಟಾನಿಸ್ಲಾವ್ ಕಾನಿಯಾ ಹಾಗೂ ಇತರ ಸಂಗಾತಿಗಳು ಸಹಮತಿಯನ್ನೂ ಸೂಚಿಸಿದ್ದರೆಂಬುದನ್ನು ಇಲ್ಲಿ ಒತ್ತಿ ಹೇಳಬಯಸುತ್ತೇವೆ. ಆದರೆ ಏನೂ ಬದಲಾಗಲಿಲ್ಲ. ರಿಯಾಯ್ತಿ ಹಾಗೂ ಒಪ್ಪಂದಗಳು ಮುಂದುವರೆದವು. ಪ್ರತಿಕ್ರಾಂತಿಯ ಸಂಘಟಕರನ್ನು ಇದುವರೆಗೂ ನೇರವಾಗಿ ಹೆಸರಿಸಿಲ್ಲ.

ಸೋವಿಯೆಟ್ ವಿರೋಧೀ ಅಪಪ್ರಚಾರ

ಪಿ.ಯು.ಡಬ್ಲ್ಯು.ಪಿ.ಯ ಸಮ್ಮೇಳನಕ್ಕೆ ಸುಮಾರು ಒಂದು ತಿಂಗಳಿದೆಯಷ್ಟೆ. ಅಷ್ಟರಲ್ಲೇ ಅದರ ಚುನಾವಣೆಗಳ ಪ್ರಚಾರದ ದಿಕ್ಕನ್ನು ಸಮಾಜವಾದದ ಶತ್ರುಗಳು ನಿರ್ದೇಶಿಸುತ್ತಿರುವಂತೆ ಕಾಣುತ್ತಿದೆ. ಪಕ್ಷದ ಅನುಭವೀ ಹಾಗೂ ಪಕ್ಷಕ್ಕೆ ತಮ್ಮನ್ನು ಸಮರ್ಪಿಸಿಕೊಂಡ, ನಿಷ್ಕಳಂಕ ಚಾರಿತ್ರ್ಯ ಹೊಂದಿರುವ ಕಾರ್ಯಕರ್ತರನ್ನು ವಜಾಮಾಡಲಾಗುತ್ತಿದೆ. ಬಹಿರಂಗವಾಗಿಯೇ ಸಂದರ್ಭಸಾಧಕ

ಅಭಿಪ್ರಾಯ ವ್ಯಕ್ತಪಡಿಸುವವರೂ ಪಕ್ಷದ ಸ್ಥಳೀಯ ಶಾಖೆಗಳ ನಾಯಕರಾಗುತ್ತಿರುವುದೂ ತೀರ ಅಪರೂಪದ ಸಂಗತಿಯಾಗಿಲ್ಲ. ಪಕ್ಷದ ಸಮ್ಮೇಳನದಲ್ಲಿ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ಮಾರ್ಗವನ್ನೇ ನಿರ್ಣಾಯಕವಾಗಿ ಸೋಲಿಸಲು ಪ್ರಯತ್ನ ನಡೆಯುವುದರ ಸಂಭವ ಇಲ್ಲವೆನ್ನಲಾಗುವುದಿಲ್ಲ.

ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಪ್ರತಿಕ್ರಾಂತಿ ಶಕ್ತಿಗಳು ಸೋವಿಯೆಟ್ ವಿರೋಧಿ ಸುಳ್ಳು ಕಲ್ಪನೆಗಳನ್ನು ಹರಡಿಸುತ್ತಿವೆ. ಈ ನೀಚ ಸುಳ್ಳುಗಾರರು ಯಾವ ಕೆಳಮಟ್ಟಕ್ಕಿಳಿಯಲೂ ಹೇಸುವುದಿಲ್ಲ. ಸೋವಿಯೆಟ್ ಯೂನಿಯನನ್ನು ಪೋಲಂಡಿನ "ಸುಲಿಗೆಗಾರರು" ಎಂದು ಚಿತ್ರಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಅಗಾಧ ಪ್ರಮಾಣದ ಸಹಾಯವನ್ನು ಒದಗಿಸುತ್ತಾ ಬಂದಿದ್ದ, ಈಗಿನ ಕಷ್ಟದ ಸಮಯದಲ್ಲೂ ಒದಗಿಸುತ್ತಿರುವ ಒಂದು ದೇಶದ ಬಗ್ಗೆ ಹೀಗೆ ಹೇಳಲಾಗುತ್ತಿದೆ. ತೈಲ, ಅನಿಲ, ಖನಿಜ ಹಾಗೂ ಹತ್ತಿಯನ್ನು ಜಾಗತಿಕ ಬೆಲೆಗಳಿಗಿಂತ 30 ರಿಂದ 50 ಶೇಕಡಾ ಕಡಿಮೆ ಬೆಲೆಯಲ್ಲಿ ಒದಗಿಸಿ ನಿಜವಾಗಿ ಪೋಲಂಡಿನ ಕೈಗಾರಿಕೆಯ ಪ್ರಮುಖ ಶಾಖೆಗಳಿಗೆ ಬೆಂಬಲವಾಗಿ ನಿಂತಿರುವ ಒಂದು ದೇಶದ ಬಗ್ಗೆ ಹೀಗೆ ಹೇಳಲಾಗುತ್ತಿದೆ.

ಮಾನ್ಯ ಸಂಗಾತಿಗಳೇ. ಈ ಪತ್ರ ಬರೆಯುವಾಗ ನಾವು ಸೋದರ ಪೋಲಂಡಿನ ಸ್ಥಿತಿಯ ಬಗ್ಗೆ ಅಥವಾ ಪೋಲೆಂಡ್–ಸೋವಿಯೆಟ್ ಸಹಕಾರದ ಭವಿಷ್ಯದ ಬಗ್ಗೆ ಮಾತ್ರ ಆತಂಕಗೊಂಡಿಲ್ಲ. ಪೋಲೆಂಡ್ ಜನತಾ ಗಣರಾಜ್ಯಕ್ಕೆ ಒದಗಿರುವ ವಿಪತ್ತು ಇಡೀ ಸಮಾಜವಾದೀ ಸಮುದಾಯದ ಸಹಯೋಗ, ಸಮಗ್ರತೆ ಹಾಗೂ ರಕ್ಷಣೆಗೇ ಒದಗಿರುವ ವಿಪತ್ತು. ಹೌದು, ನಮ್ಮೆಲ್ಲರ ಭದ್ರತೆಗೆ ಒದಗಿರುವ ವಿಪತ್ತು. ಪೋಲಂಡಿನ ಪ್ರತಿಕ್ರಾಂತಿಗೆ ಬೆಂಬಲ ನೀಡುತ್ತಿರುವ ಸಾಮ್ರಾಜ್ಯವಾದೀ ಪ್ರತಿಕ್ರಿಯೆ ಯುರೋಪಿನಲ್ಲಿ ಹಾಗೂ ಜಗತ್ತಿನಲ್ಲಿನ ಸಮತೋಲನವನ್ನು ತಮಗೆ ಅನುಕೂಲವಾಗುವಂತೆ ತೀವ್ರವಾಗಿ ಬದಲಿಸುವ ತಮ್ಮ ಆಕಾಂಕ್ಷೆಯನ್ನು ಮುಚ್ಚು ಮರೆಯಿಲ್ಲದೆ ಸ್ಪಷ್ಟಗೊಳಿಸಿವೆ. ಪೋಲಂಡಿನ ಬಿಕ್ಕಟ್ಟನ್ನು ಸಮಾಜವಾದಿ ವ್ಯವಸ್ಥೆಯ ನೀತಿಗಳ ವಿರುದ್ಧ, ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ವಿರುದ್ಧ ಮತ್ತೆ ದಾಳಿ ನಡೆಸಲು ಸಾಮ್ರಾಜ್ಯಶಾಹಿಗಳು ಸಕ್ರಿಯವಾಗಿ ಉಪಯೋಗಿಸುತ್ತಿವೆ.

ಆದ್ದರಿಂದ ಪಿ.ಯು.ಡಬ್ಲ್ಯೂ.ಪಿ.ಯು ಹೆಗಲ ಮೇಲೆ ಒಂದು ಚಾರಿತ್ರಿಕ ಹೊಣೆಯಿದೆ. ತನ್ನ ನೆಲದ ಭವಿಷ್ಯ, ಅದರ ಸ್ವಾತಂತ್ರ್ಯ ಹಾಗೂ ಪ್ರಗತಿಯ, ಪೋಲಂಡಿನ ಸಮಾಜವಾದದ ಹೊಣೆ ಮಾತ್ರವಲ್ಲ ಅದಕ್ಕಿರುವುದು. ಸಂಗಾತಿಗಳೇ ನೀವು ಸಮಾಜವಾದೀ ಸಮುದಾಯದ ಎಲ್ಲರ ಹಿತಾಸಕ್ತಿಗಳ ರಕ್ಷಣೆಯ ಜವಾಬ್ದಾರಿಯನ್ನೂ ಹೊತ್ತಿದ್ದೀರಿ.

'ಕೈಬಿಡಲಾರೆವು'

ವರ್ಗಶತ್ರುವನ್ನು ಹೊಡೆದೋಡಿಸಲು, ಪ್ರತಿಕ್ರಾಂತಿಯ ವಿರುದ್ಧ ಹೋರಾಡಲು ಪೋಲಂಡಿನ ಸಮಾಜದ ಎಲ್ಲಾ ಶಕ್ತಿಗಳನ್ನು ಒಗ್ಗೂಡಿಸಬೇಕು. ಇದಕ್ಕಾಗಿ ಮೊತ್ತಮೊದಲು ಪಕ್ಷ, ಅದರ ಕಾರ್ಯಕರ್ತರು ಹಾಗೂ ನಾಯಕತ್ವ ಒಂದು ದೃಢ ನಿರ್ಧಾರ ಕೈಗೊಳ್ಳಬೇಕು. ಹೌದು, ನಾಯಕತ್ವ ಘಟನೆಗಳ ದಿಕ್ಕನ್ನು ಬದಲಿಸಲು ಸಾಕಷ್ಟು ಶಕ್ತಿ ಸಂಪಾದಿಸುವುದು ಪಕ್ಷಕ್ಕೆ ಸಾಧ್ಯವಿದೆ. ಅದನ್ನು ಮಾಡಲೇಬೇಕು. ಸೋದರ ಪೋಲಂಡಿನ ಕಮ್ಯೂನಿಸ್ಟರ ಪಕ್ಷದ ಕೇಂದ್ರ ಸಮಿತಿ ತಮ್ಮ ಈ ಚಾರಿತ್ರಿಕ ಜವಾಬ್ದಾರಿ ಹೊರಲು ಸಶಕ್ತರು ಎಂಬ ಭರವಸೆ ನಮಗಿದೆ.

ಎಂದಿನಂತೆ, ಪ್ರಿಯ ಸಂಗಾತಿಗಳೇ, ಸಿ.ಪಿ.ಎಸ್.ಯು.ನ ಕೇಂದ್ರ ಸಮಿತಿ, ಎಲ್ಲಾ ಸೋವಿಯೆಟ್ ಕಮ್ಯೂನಿಸ್ಟರು ಹಾಗೂ ಸಂಪೂರ್ಣ ಸೋವಿಯೆಟ್ ಜನತೆ ನಿಮ್ಮ ಹೋರಾಟಕ್ಕೆ ಸೌಹಾರ್ದತೆ ವ್ಯಕ್ತಪಡಿಸುತ್ತಾರೆ ಎಂದು ಭರವಸೆನೀಡುತ್ತೇವೆ. ನಮ್ಮ ನಿಲುವನ್ನು ಸಿ.ಪಿ.ಎಸ್.ಯು.ನ 26ನೇ ಸಮ್ಮೇಳನದಲ್ಲಿ ಕಾಮ್ರೇಡ್ ಎಲ್.ಐ. ಬ್ರೆಜ್ನೇವ್ ಸ್ಪಷ್ಟವಾಗಿ ತಿಳಿಸಿದ್ದಾರೆ- "ಅದರ ಅಗತ್ಯದ ಸಮಯದಲ್ಲಿ ನಾವು ಸೋದರ, ಸಮಾಜವಾದೀ ಪೋಲಂಡಿನ ಕೈಬಿಡುವುದಿಲ್ಲ. ನಾವು ಅದರ ಬೆಂಬಲಕ್ಕೆ ನಿಲ್ಲುತ್ತೇವೆ".

ಪೋಲಂಡಿನ ಪಕ್ಷದ ಸಮ್ಮೇಳನಕ್ಕೆ ಕಾನಿಯಾನ ವರದಿ

ಪೋಲೆಂಡ್ ಸಂಯುಕ್ತ ಕಾರ್ಮಿಕ ಪಕ್ಷ (ಪಿ.ಯು.ಡಬ್ಲ್ಯೂ.ಪಿ.) ಒಂಭತ್ತನೇ ವಿಶೇಷ ಸಮ್ಮೇಳನ ದೇಶ ಅನುಭವಿಸುತ್ತಿರುವ ಗಂಭೀರ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವಾರ್ಸಾದಲ್ಲಿ ಜುಲೈ 14ರಿಂದ ಆರಂಭವಾಯಿತು. ಸಮ್ಮೇಳನದ ಕೊನೆಯಲ್ಲಿ ಪಿ.ಯು. ಡಬ್ಲ್ಯೂ.ಪಿ.ಗೆ ಹೊಸ ನಾಯಕತ್ವದ ಚುನಾವಣೆಯಾಯಿತು. ಸಮ್ಮೇಳನಕ್ಕೆ ಸ್ಟಾನಿಸ್ಲಾವ್ ಕಾನಿಯಾ ಒಪ್ಪಿಸಿದ ವರದಿಯ ಕೆಲವಂಶ ಇಲ್ಲಿದೆ.

ಜನತಾ ಪೋಲಂಡಿನ ಭವಿಷ್ಯದ ಬಗ್ಗೆ ಯೋಚಿಸಲು, ಆತಂಕ ವ್ಯಕ್ತಪಡಿಸಲು ಅದಕ್ಕಿಂತ ಹೆಚ್ಚಾಗಿ ಕಾತರಗೊಳ್ಳಲು ಸಾಕಷ್ಟು ಕಾರಣಗಳಿವೆ. ಪೋಲೆಂಡ್‌ನಲ್ಲಿ ಅಧಿಕಾರಕ್ಕಾಗಿ, ರಾಷ್ಟ್ರದ ಪ್ರತಿಷ್ಠೆಗಾಗಿ ಹಾಗೂ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ರಾಷ್ಟ್ರದ ಸ್ಥಾನ ಹಾಗೂ ಮಾರ್ಗವನ್ನು ಕುರಿತಂತೆ ಕಟುವಾದ ಸೈದ್ಧಾಂತಿಕ ಹಾಗೂ ರಾಜಕೀಯ ವರ್ಗ ಹೋರಾಟ ನಡೆಯುತ್ತಿದೆ. ಈ ಬಗ್ಗೆ ಯಾರಿಗೂ ಭ್ರಮೆ ಬೇಡ.

ಸಮಾಜವಾದಕ್ಕೆ ಬಂದಿರುವ ಬೆದರಿಕೆ, ಪ್ರತಿಕ್ರಾಂತಿ ಶಕ್ತಿಗಳ ಕೃತ್ಯಗಳು, ಆಳವಾದ ಆರ್ಥಿಕ ಬಿಕ್ಕಟ್ಟು, ಸಾರ್ವಜನಿಕ ಶಿಸ್ತಿನ ಇಳಿಮುಖ, ಸರಕಾರೀ ಸಂಸ್ಥೆಗಳ ಕಾರ್ಯನಿರ್ವಹಣೆಗಳಿಗುಂಟಾದ ಅಡೆ–ತಡೆ, ಈ ಪರಿಸ್ಥಿತಿಯನ್ನು ಬದಲಿಸಬೇಕು. ಪರಿಣಾಮಕಾರೀ ಸಮಾಜವಾದೀ ಮುನ್ನಡೆಯ ಹಾದಿಯಲ್ಲಿ ದೇಶವನ್ನು ಕೊಂಡೊಯ್ಯಬೇಕು. ಪಕ್ಷ ಲಕ್ಷಗಟ್ಟಲೆ ಪೋಲೆಂಡ್ ನಿವಾಸಿಗಳು ಹಾಗೂ ನಮ್ಮ ಮಿತ್ರರು ನಮ್ಮಿಂದ ಇದನ್ನು ನಿರೀಕ್ಷಿಸುತ್ತಿದ್ದಾರೆ.

ರಾಜಕೀಯ ಅಲ್ಲೋಲಕಲ್ಲೋಲ ಜನತಾ ಪೋಲಂಡಿನಲ್ಲಿ ಇದೇನು ಮೊದಲನೇ ಸಲವಲ್ಲ.

ಈ ರೀತಿಯ ಅತೃಪ್ತಿ, ಪೋಲಂಡಿನ ಚರಿತ್ರೆಯಲ್ಲಿ ಅತೀ ಗಂಭೀರವಾದ ಬಿಕ್ಕಟ್ಟಿಗೆ ಕಾರಣವಾದ ಎಲ್ಲದರ ಪೂರ್ಣ ವಿಶ್ಲೇಷಣೆಯಾಗಬೇಕು. ಈಗಿನ ಬಿಕ್ಕಟ್ಟಿಗೆ ಆರ್ಥಿಕ ಹಾಗೂ ಸಾಮಾಜಿಕ ನೀತಿಗಳಲ್ಲಿ ಎಪ್ಪತ್ತರ ದಶಕದಲ್ಲಿ ಅನುಸರಿಸಿದ ಪರಿಕಲ್ಪನೆಗಳು ಕಾರಣ. ಇದರಿಂದ ಬಂಡವಾಳ ವಿನಿಯೋಗದಲ್ಲಿ ತೀವ್ರ ಅಸಮತೋಲನ ಬೆಳೆದು, ಸಾಲ ಹೆಚ್ಚಿತು. ಕೃಷಿಕ್ಷೇತ್ರದಲ್ಲಿನ ತಪ್ಪುಗಳಿಂದಾಗಿ ಕೃಷಿ ಉತ್ಪಾದನೆ ಸ್ಥಗಿತಗೊಂಡಿತು. ಆರ್ಥಿಕ ಮೇಲ್ವಿಚಾರಣೆ ಹಾಗೂ ಯೋಜನೆ ಆವಶ್ಯಕತೆಗಳಿಗನುಗುಣವಾಗಿರದೆ ಆರ್ಥಿಕ ಅದಕ್ಷತೆಗೆ, ಅವ್ಯವಸ್ಥೆಗೆ, ಉತ್ಪಾದಕ ಗುಂಪುಗಳಿಗೆ ತಮ್ಮ ಕೆಲಸದ ಫಲಿತಾಂಶದ ಬಗ್ಗೆ ನಿರಾಸಕ್ತಿಗೆ ಕಾರಣವಾಯಿತು.

ಪಕ್ಷದ ಜವಾಬ್ದಾರಿ

ಹೆಚ್ಚುತ್ತಿದ್ದ ಸಾರ್ವಜನಿಕ ಅತೃಪ್ತಿ ಸಮಾಜವಾದ ವಿರೋಧೀ ಚಟುವಟಿಕೆಗಳಿಗೆ ಆಡಿಗಲ್ಲಾಯಿತು. ಈ ಚಟುವಟಿಕೆಗಳಿಗೆ ಬಂಡಮೇಲು ಕೃತ್ಯಗಳಲ್ಲಿ ವಿಶೇಷ ಪರಿಣತಿಪಡೆದ ಪಾಶ್ಚಿಮಾತ್ಯ ಕೇಂದ್ರಗಳಿಂದ ಸ್ಫೂರ್ತಿ, ಪ್ರೋತ್ಸಾಹ, ಬೆಂಬಲ ಸಿಕ್ಕಿತು.

ಲೆನಿನ್‌ವಾದೀ ನೀತಿಗಳಿಂದ ದೂರ ಸರಿದುದೇ ಈ ರೀತಿ ತಪ್ಪುಗಳನ್ನು ಮಾಡುತ್ತಾ ಹೋಗಲು ಮೂಲಭೂತ ಕಾರಣ.

ಪಕ್ಷ ಪ್ರಾಮುಖ್ಯವಾಗಿ ದೇಶದಲ್ಲಿ ಸಮಾಜವಾದದ ಮೂಲಭೂತ ಮೌಲ್ಯಗಳನ್ನು ಪಕ್ಷದಲ್ಲಿ ಲೆನಿನ್‌ವಾದೀ ನೀತಿಗಳನ್ನು ಆಮೂಲಾಗ್ರ ಆರ್ಥಿಕ ಸುಧಾರಣೆ, ಸಮಾಜವಾದೀ ಪ್ರಜಾಪ್ರಭುತ್ವ, ಕಾನೂನಿಗೆ ಮನ್ನಣೆ, ಸಾರ್ವಜನಿಕ ಶಿಸ್ತು ಇವೆಲ್ಲವನ್ನೂ ಪುನಃ ಸ್ಥಾಪಿಸಬೇಕು. ಅಂದರೆ ಪಕ್ಷದ ಪ್ರಮುಖ ಪಾತ್ರವನ್ನು ಬಲಗೊಳಿಸಬೇಕು. ಅಂದರೆ ಸಾಮಾಜಿಕ ನ್ಯಾಯ ಚಾರಿತ್ರ್ಯ ಮುಂತಾದ ನೀತಿಗಳನ್ನು ಮತ್ತೆ ಸ್ಥಾಪಿಸಬೇಕು. ವ್ಯಕ್ತಿಗಳ ನಡುವೆ ಮಾನವೀಯ ಸಂಬಂಧಗಳು, ಮಾನವನ ದುಡಿಯುವ ವ್ಯಕ್ತಿ ಮತ್ತು ನಾಗರಿಕನ ಘನತೆಗೆ ಮನ್ನಣೆಯಿರುವ ಸ್ಥಿತಿಯನ್ನು ಸೃಷ್ಟಿಸಬೇಕು.

ನಾವು ನಮ್ಮ ಕಾರ್ಯಕ್ರಮಗಳನ್ನು ಅತೀ ಕಷ್ಟಕರವಾದ ಸಮಯದಲ್ಲಿ ನಡೆಸಬೇಕಾಗಿದೆ. ಅಧಿಕಾರಿಗಳಲ್ಲಿ ಸಮುದಾಯದ ನಂಬಿಕೆ ಹಾಗೂ ಪಕ್ಷದಲ್ಲಿ ಕಾರ್ಮಿಕವರ್ಗದ ನಂಬಿಕೆಯ ದೊಡ್ಡ ಪ್ರಶ್ನೆಯಿದೆ.

ಸಮುದಾಯದಲ್ಲಿ ಕಾರ್ಮಿಕ ವರ್ಗದ ಮುಂದಾಳತನದ ಪಾತ್ರವನ್ನು ಮತ್ತೊಮ್ಮೆ ದೃಢಪಡಿಸುವುದು ನಮ್ಮ ಪಕ್ಷದ ಕರ್ತವ್ಯ.

ಪ್ರತಿಕ್ರಾಂತಿ ಶಕ್ತಿಗಳ ಹುಂಚಿಕೆ

ಪಕ್ಷ ಹಲವು ಬಾರಿ ಸಾರ್ವಜನಿಕವಾಗಿ "ಸಾಲಿಡಾರಿಟಿ" ಬಗ್ಗೆ ತನ್ನ ರಚನಾತ್ಮಕ ನಿಲುವನ್ನು ಸ್ಪಷ್ಟಪಡಿಸಿದೆ. ಅದನ್ನು ಇನ್ನೊಮ್ಮೆ ಸ್ಪಷ್ಟಪಡಿಸುತ್ತೇವೆ. ಈ ಸಂಘಟನೆಯ ಭಿನ್ನಗುಣಾತ್ಮಕ ಸ್ವರೂಪ ನಮಗೆ ಕಾಣುತ್ತಿದೆ. ನಿಜವಾಗಿ ಪರಸ್ಪರ ವಿರೋಧಿಯಾದ ವಿಭಿನ್ನ ಪ್ರವೃತ್ತಿಗಳು ಅದರಲ್ಲಿದೆ. ಪೋಲಂಡಿನ ಎಲ್ಲಾ ಪ್ರತಿಕ್ರಿಯಾವಾದಿ ಶಕ್ತಿಗಳು 'ಸಾಲಿಡಾರಿಟಿ' ಒಂದು ಕಾರ್ಮಿಕ ಮಹಾಸಂಘವಾಗಿರದೆ ರಾಜಕೀಯಪಕ್ಷವಾಗುವಂತೆ ಪ್ರಯತ್ನಿಸುತ್ತಿದ್ದಾರೆ. ಅವರೆಲ್ಲರಿಗೆ ಬೇಕಾಗಿರುವುದು ಕಾರ್ಮಿಕ ವರ್ಗ ತನ್ನ ನೆಲದ ಯಜಮಾನನಾಗಿರುವುದು ಅಲ್ಲ. ತಮ್ಮ ರಾಜಕೀಯ ಆಟಗಳಿಗೆ ಅನುಕೂಲವಾಗುವಂತೆ ಒತ್ತಡ ತರುವ 'ಪ್ರಭಾವ ಗುಂಪು' ಮಾತ್ರ ಆಗಿರಬೇಕೆಂದು ಅವರ ಆಸೆ.

ಸಮಾಜವಾದದ ಶತ್ರುಗಳು ತಪ್ಪುಗಳಿಂದಾಗಿ ಉಂಟಾದ ಬಿಕ್ಕಟ್ಟು ಮತ್ತು ಸಾರ್ವಜನಿಕ ಅತೃಪ್ತಿಯ ಮೇಲೆ ತಮ್ಮ ಆಸೆಯಿರಿಸಿಕೊಂಡಿದ್ದಾರೆ. ಆದ್ದರಿಂದ ಕಾರ್ಮಿಕರ ಹಿತಾಸಕ್ತಿಗಳ ರಕ್ಷಕರೆಂಬ ವೇಷತೊಟ್ಟಿದ್ದಾರೆ. ಆ ಮೂಲಕ ಪ್ರತಿಕ್ರಾಂತಿ ಹಾಗೂ ಅಧಿಕಾರ ಗ್ರಹಣಕ್ಕೆ ಜನತೆ ಪ್ರತಿಕ್ರಿಯಿಸಲಾಗದಂತೆ ಮಾಡಲು ಯತ್ನಿಸುತ್ತಿದ್ದಾರೆ.

ನಾವು ಸಂಕಷ್ಟಗಳನ್ನು ಪರಿಹರಿಸ ಬಯಸುತ್ತೇವೆ. ಅವರು ಅದರ ಲಾಭ ಪಡೆಯಬಯಸುತ್ತಿದ್ದಾರೆ. ಇದೇ ನಮ್ಮಿಬ್ಬರನ್ನು ಬೇರ್ಪಡಿಸುವ ಸಂಗತಿ. ಸಮಾಜವಾದದ ವಿರೋಧಿಗಳು "ಸಾಲಿಡಾರಿಟಿ"ಯ ಬಗ್ಗೆ ಬಹಳ ನಿರೀಕ್ಷೆಯಿಟ್ಟುಕೊಂಡಿದ್ದಾರೆ. ಕಾರ್ಮಿಕರ ಹಿತಾಸಕ್ತಿಗಳಿಗೆ ಏನೇನೂ ಸಂಬಂಧವಿಲ್ಲದ ವಿಷಯಗಳ ಕಡೆಗೆ ಈ ಕಾರ್ಮಿಕ ಸಂಘವನ್ನು ತಳ್ಳುತ್ತಿದ್ದಾರೆ. "ಸಾಲಿಡಾರಿಟಿ" ಕಾರ್ಮಿಕ ಸಂಘದೊಳಗಿರುವ ಇಂತಹ ಪ್ರವೃತ್ತಿಗಳನ್ನು ಕೂಡಾ ನಮ್ಮ ಪಕ್ಷ ಬಲವಾಗಿ ವಿರೋಧಿಸುತ್ತದೆ.

ಪ್ರತಿಕ್ರಾಂತಿಯ ಯೋಜನೆಗಳು ಪೋಲಂಡಿನಲ್ಲಿ ಸಫಲವಾಗುವುದಿಲ್ಲ. ಪಕ್ಷ ಹಾಗೂ ಸಾಮಾನ್ಯ ಜ್ಞಾನ ಹೊಂದಿರುವ ಎಲ್ಲಾ ಶಕ್ತಿಗಳು ನಮ್ಮ ಪ್ರಭುತ್ವ ಸಮಾಜವಾದದದಾರಿಯನ್ನು ಬಿಟ್ಟು ಸರಿಯಲು ಅವಕಾಶ ಕೊಡುವುದಿಲ್ಲ.

ಸಾಮಾಜಿಕ ಜನತಂತ್ರದ ಸಿದ್ಧಾಂತದ ಒತ್ತಡ, ಪರಿಷ್ಕರಣವಾದೀ ಪರಿಕಲ್ಪನೆಗಳು ಹಾಗೂ ಇತರ ಬಲಪಂಥೀಯ ಸಮಯ ಸಾಧಕತೆಯ ಒತ್ತಡ ಪಕ್ಷಕ್ಕೆ ಬಹಳ ಹಾನಿಯುಂಟು ಮಾಡಿವೆ. ಸಂಪ್ರದಾಯ ಶರಣತೆಯಂತೆ ಸೈದ್ಧಾಂತಿಕ ಶರಣಾಗತಿಯೂ ಪಕ್ಷಕ್ಕೆ ತೀವ್ರ ಕೆಡಕುಂಟುಮಾಡುತ್ತದೆ.

ಬಿಕ್ಕಟ್ಟು ಪರಿಹಾರಕ್ಕೆ ಕಾರ್ಯಕ್ರಮ

ಉತ್ಪಾದನೆ ಇಳಿಮುಖವಾಗುತ್ತಿರುವ ಪ್ರವೃತ್ತಿಯನ್ನು ತಡೆಯಬೇಕು. ಆರ್ಥಿಕತೆ ಸಾಮಾನ್ಯ ಕಾರ್ಯನಿರ್ವಹಣೆಯೊಂದಿಗೆ ಸರಿಹೊಂದುವಂತೆ ಮಾಡಿ ಸಾರ್ವಜನಿಕ ಅಗತ್ಯತೆಯನ್ನು ತೃಪ್ತಿಪಡಿಸುವ ಅದರ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಆರ್ಥಿಕ ಸುಧಾರಣೆ ತರುವಲ್ಲಿ ಇದು ಮುಖ್ಯ ಅಂಶ.

'ಪರಸ್ಪರ ಆರ್ಥಿಕ ಸಹಾಯದ ಸಮಿತಿ' (ಸಿ.ಎಂ.ಇ.ಎ.)ಯ ಸದಸ್ಯ ದೇಶಗಳೊಂದಿಗೆ ಸಹಕರಿಸಿ ಸಮಾಜವಾದೀ ಆರ್ಥಿಕ ಸಮಗ್ರೀಕರಣದ ಕಾರ್ಯಕ್ರಮವನ್ನು ಪಾಲಿಸಬೇಕು. ನಮಗೆ ನೀಡುತ್ತಿರುವ ನೆರವಿಗೆ ಹಾಗೂ ನಮ್ಮ ಕಷ್ಟಕರ ಸ್ಥಿತಿಯನ್ನು ಅರ್ಥಮಾಡಿಕೊಂಡಿರುವುದಕ್ಕೆ ಈ ಸೋದರ ದೇಶಗಳಿಗೆ ನಾವು ಕೃತಜ್ಞರು.

ಬಿಕ್ಕಟ್ಟನ್ನು ಪರಿಹರಿಸುವ ಕಾರ್ಯಕ್ರಮದ ರಾಜಕೀಯ ಅಂಶವೆಂದರೆ, ಕೇಂದ್ರೀಕೃತ ಯೋಜನೆಯನ್ನು ಬಲಪಡಿಸುವುದು, ಆರ್ಥಿಕ ಗುರಿಗಳನ್ನು ನಿರ್ಧರಿಸುವಲ್ಲಿ ದುಡಿಯುವ ಜನರು ಹಾಗೂ ಅವರ ಸಂಘಟನೆಗಳು ಸಾಧ್ಯವಾದಷ್ಟು ವಿಸ್ತೃತ ಪಾತ್ರವಿರುವಂತೆ ನೋಡಿಕೊಳ್ಳುವುದು.

ವಿದೇಶಿ ಧೋರಣೆ

ಸೋವಿಯೆಟ್ ಸಂಘದೊಡನೆ ಮಿತ್ರತ್ವ ಹಾಗೂ ಸರ್ವತೋಮುಖ ಸಹಕಾರ ಹಿಟ್ಲರ್‌ವಾದದ ವಿರುದ್ಧ ಹೋರಾಟದ ಸಂದರ್ಭದಿಂದಲೇ ಪ್ರಾರಂಭವಾಯಿತು. ವಿಮೋಚನಾ ಹೋರಾಟದಲ್ಲಿ 6 ಲಕ್ಷಕ್ಕಿಂತಲೂ ಹೆಚ್ಚು ಸೋವಿಯೆಟ್ ಸೈನಿಕರು ಪೋಲಂಡಿನ ಮಣ್ಣಿನಲ್ಲಿ ಪ್ರಾಣಾರ್ಪಣೆ ಮಾಡಿದರು. ಸೋವಿಯೆಟ್ ಸಂಘ ಹಾಗೂ ಸಮಾಜವಾದೀ ಸಮುದಾಯದ ಇತರ ದೇಶಗಳೊಂದಿಗೆ ಮಿತ್ರಕೂಟ, ವಾರ್ಸಾ ಸಂಧಿ ಸಂಘಟನೆಯಲ್ಲಿ ಭಾಗವಹಿಸುವುದು. 'ಪರಸ್ಪರ ಆರ್ಥಿಕ ಸಹಾಯ ಸಮಿತಿ'ಯ ಚೌಕಟ್ಟಿನೊಳಗೆ ಸಹಕಾರ ಹಾಗೂ ಜಗತ್ತಿನ ಎಲ್ಲಾ ಪ್ರಗತಿಶೀಲ ಶಕ್ತಿಗಳೊಂದಿಗೆ ಸೌಹಾರ್ದತೆ, ಇವು ನಮ್ಮ ದೇಶದ ಜನರ ಚಾರಿತ್ರಿಕ ಅನುಭವದಿಂದ ಹೊರಹೊಮ್ಮಿದ ಮಾರ್ಗ. ಸೋವಿಯೆಟ್ ಸಂಘದೊಂದಿಗೆ ಮಿತ್ರಕೂಟವೇ ಪೋಲಂಡಿನ ಸ್ವಾತಂತ್ರ್ಯ ಹಾಗೂ ಗಡಿ ಭದ್ರತೆಯ ಗ್ಯಾರಂಟಿ. ಆದ್ದರಿಂದ ಈ ಮಿತ್ರತ್ವವನ್ನು ಮುಂದಿ

(6ನೇ ಪುಟ ನೋಡಿ)

ಸಾಮ್ರಾಜ್ಯವಾದಿಗಳ ಕುತಂತ್ರಗಳು ; ಆಳುವ ವರ್ಗದ ಮೋಸಗಳು

(3ನೇ ಪುಟದಿಂದ)

ವಾದಿ ಬಣದೊಳಗಿನ ಭಿನ್ನತೆಗಳನ್ನು ಅವರು ಎಡಪಂಥೀಯ ಚಳುವಳಿಗಳನ್ನು ಒಡೆಯಲು ಅವರು ಉಪಯೋಗಿಸುತ್ತಾರೆ. ಪ್ರಚೋದನಕಾರಿ ಏಜೆಂಟರ ಒಂದು ಜಾಲವನ್ನೇ ಅವರು ಹರಡಿದ್ದಾರೆ. ಎಡ ಚಳುವಳಿಯನ್ನು ಮುರಿಯಬೇಕೆನ್ನುವ ಏಜೆಂಟರು ಹಗಲುರಾತ್ರಿ ಕೆಲಸಮಾಡುತ್ತಿದ್ದಾರೆ.

ಒಂದೇ ಮಾತಿನಲ್ಲಿ ಹೇಳುವುದಾದರೆ ಎಲ್ಲಾ ವಿಭಿದ್ರಕಾರಿ ಶಕ್ತಿಗಳಿಗೆ ಸಾಮ್ರಾಜ್ಯವಾದಿಗಳು ಸಹಾಯ ಮಾಡುತ್ತಿದ್ದಾರೆ. ಮತ್ತೆ ಹೇಳುವುದಾದರೆ ನಮ್ಮ ದೇಶದ ಐಕ್ಯ ಹಾಗೂ ಸ್ವಾತಂತ್ರ್ಯಗಳೇ ಅಪಾಯದಲ್ಲಿವೆ. ಇದೆಲ್ಲದರ ಮೇಲೆ ಕಳಸವಿಟ್ಟಂತೆ ನಮ್ಮ ಉಪಖಂಡದಲ್ಲಿ ಮತ್ತೊಂದು ಯುದ್ಧವನ್ನು ಪ್ರಚೋದಿಸಲು ಸಾಮ್ರಾಜ್ಯವಾದಿಗಳು ಪಾಕಿಸ್ತಾನಕ್ಕೆ ಮಾರಕಾಸ್ತ್ರಗಳನ್ನು ಒದಗಿಸುತ್ತಿದ್ದಾರೆ. ಇರಾಕ್‌ನ ಅಣುಶಕ್ತಿ ಕೇಂದ್ರವನ್ನು ನಾಶಮಾಡಲು ಇಸ್ರೇಲ್ ಬಳಸಿದ ಎಫ್-16 ಬಾಂಬರ್‌ಗಳನ್ನು ಪಾಕ್‌ಗೆ ಕೊಡುತ್ತಿರುವುದು ಮತ್ತು ಭಾರತದ ಅಣುಶಕ್ತಿ ಕಾರ್ಯಕ್ರಮವನ್ನು ತಡೆಹಿಡಿಯಲು ತಾರಾಪುರ ಅಣುಸ್ಥಾವರದ ವಿಷಯದಲ್ಲಿ ನಡೆದ ವಿವಾದ ಇವರದನ್ನು ಕೂಡಿ ನಾವು ಗಮನಿಸಬೇಕು. ನಮ್ಮ ಅನೇಕ ರಾಜಕಾರಣಿಗಳು ಸಾಮ್ರಾಜ್ಯಶಾಹಿಗಳ ಮೋಸಗಳನ್ನು ಅರ್ಥಮಾಡಿಕೊಂಡಿಲ್ಲ. ಅರ್ಥಮಾಡಿಕೊಂಡಿದ್ದೂ ಈ ರೀತಿ ವರ್ತಿಸುತ್ತಿರುವುದಾದಲ್ಲಿ ಅವರು ಸಾಮ್ರಾಜ್ಯಶಾಹಿಗಳ ಸಹಾನುಭೂತಿಪರರಾಗಿದ್ದಾರೆಂದು ಸರಳವಾಗಿ ಗುರುತಿಸಬಹುದು.

"ಸಾಮ್ರಾಜ್ಯವಾದಿಗಳ ಈ ಕುತಂತ್ರವನ್ನು ತಡೆಗಟ್ಟುವಲ್ಲಿ ಕಾರ್ಮಿಕವರ್ಗ ಮಾತ್ರ ನೇರವಾದ ಹಿತಾಸಕ್ತಿಗಳನ್ನು ಹೊಂದಿದೆ". ಸಾಮ್ರಾಜ್ಯವಾದಿಗಳ ಕಡೆಗೆ ವಾಲುತ್ತಿರುವ ಭಾರತದ ಆಳುವವರ್ಗಗಳನ್ನು ಎಡಪಂಥೀಯ ಚಳುವಳಿ ಬಯಲಿಗೆಳೆಯಬೇಕಿದೆ. ಕಾರ್ಮಿಕವರ್ಗದ ನೇತೃತ್ವದ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿ ಮಾತ್ರ ನಮ್ಮ ದೇಶದ ಐಕ್ಯತೆ ಹಾಗೂ ಸ್ವಾತಂತ್ರ್ಯವನ್ನು ಕಾಪಾಡಬಲ್ಲದು.

70ರ ದಶಕಕ್ಕಿಂತ ಕಾರ್ಮಿಕ ವರ್ಗವು ಹೆಚ್ಚು ಐಕ್ಯದಿಂದಿರುವುದು, ಎಡಶಕ್ತಿಗಳು ತಮ್ಮ ಪಾರಂಪರಿಕ ಪ್ರದೇಶಗಳಲ್ಲಿ ಪ್ರಬಲವಾಗಿ ತಳವೂರಿರುವುದರ ಜೊತೆಗೇ ರೈತಕಾರ್ಮಿಕರ ಚಳುವಳಿಗಳ ಮುಖಾಂತರ ಹೊಸ ಪ್ರದೇಶಗಳಿಗೆ ತಮ್ಮ ಪ್ರಭಾವವನ್ನು ವಿಸ್ತರಿಸುತ್ತಿರುವುದು, ಇದೆಲ್ಲವನ್ನೂ ಸಾಮ್ರಾಜ್ಯವಾದಿಗಳು ಆಗಲೇ ಗಮನಿಸಿದ್ದಾರೆ. ಆದ್ದರಿಂದಲೇ ಸಂಕುಚಿತವಾದಿ ಘೋಷಣೆಗಳನ್ನಿತ್ತು ಜನತಾ ಚಳುವಳಿಗಳನ್ನು ಒಡೆಯಲು ಪ್ರಾರಂಭಿಸಿದ್ದಾರೆ. ಎಡ ಚಳುವಳಿಯ ವಿಸ್ತರಣೆಯ ಈ ಹೊಸ ಸಂಗತಿಯೇ ಸಾಮ್ರಾಜ್ಯವಾದಿಗಳು ಅಸ್ಸಾಂ ಮತ್ತಿತರ ಉತ್ತರಪೂರ್ವ ರಾಜ್ಯಗಳಲ್ಲಿ ಪ್ರತ್ಯೇಕತಾವಾದಿ ಚಳುವಳಿಯನ್ನೂ, ತ್ರಿಪುರಾದ ಬಂಡಕಟ್ಟು-ಬಂಗಾಲಿ ಜನಕ ಸಾಮೂಹಿಕ ಕಗ್ಗೊಲೆಯನ್ನು ಪ್ರಚೋದಿಸುವಂತೆ ಮಾಡಿದೆ. ಇನ್ನೊಂದೆಡೆ ಎಡ ಶಕ್ತಿಗಳ ಐಕ್ಯ ಮತ್ತು ಜನತೆಯ ಕಾರ್ಯಾಚರಣೆಗಳು ವೃದ್ಧಿಸಿ ತನಗೆ ಅಪಾಯವಿದೆಯೆಂದು ಗಮನಿಸಿಯೇ ಅಗತ್ಯಸೇವಾ ನಿರ್ವಹಣೆಯ ಸುಗ್ರೀವಾಜ್ಞೆಯನ್ನು ಕೇಂದ್ರ ಸರಕಾರವು ತರುವಂತೆ ಮಾಡಿದೆ.

ನಮ್ಮ ದೇಶದ ಆಳುವ ವರ್ಗದ ಮೋಸವನ್ನು ಬಯಲಿಗೆಳೆಯಲು ಮತ್ತು ದೇಶೀಯ ಹಾಗೂ ವಿದೇಶಿ ಶೋಷಣೆಯಿಂದ ಭಾರತವನ್ನು ಎಂದೆಂದಿಗೂ ಮುಕ್ತಗೊಳಿಸುವಂತೆ, ಸಾಮ್ರಾಜ್ಯವಾದಿಗಳ ಕುತಂತ್ರವನ್ನು ಬಯಲಿಗೆಳೆದು ಹೋರಾಡಲು ಕಾರ್ಮಿಕ ವರ್ಗಕ್ಕೆ ಈಗ ಅವಕಾಶವಿದೆ. ಇದರ ವಿರುದ್ಧ ಎಡಚಳುವಳಿ ಐಕ್ಯತೆಯನ್ನು ಸಾಧಿಸಬೇಕಲ್ಲದೇ ಸಾಮ್ರಾಜ್ಯಶಾಹಿಗಳ ವಿರುದ್ಧ ವಿಶಾಲವಾದ ಚಳುವಳಿ ಕಟ್ಟಲು ಮುನ್ನಡೆಯಬೇಕಿದೆ. ಅಪೂರ್ಣಗೊಂಡ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಪೂರ್ಣಗೊಳಿಸಲು ಎಲ್ಲಾ ಪ್ರಜಾಸತ್ತಾತ್ಮಕ ವಿಭಾಗಗಳಿಗೆ ಕಾರ್ಮಿಕ ವರ್ಗ ನಾಯಕತ್ವ ನೀಡಬೇಕಿದೆ. ಆಗ ಮಾತ್ರ ನಮ್ಮ ದೇಶ ಹಾಗೂ ಜನತೆ ನಿಜವಾದ ಸ್ವಾತಂತ್ರ್ಯವನ್ನು ಸಾಧಿಸಿದಂತಾಗುವದು.

ನಮ್ಮ ದೇಶದ ಐಕ್ಯವನ್ನು, ಒಗ್ಗಟ್ಟನ್ನು, ಸ್ವಾತಂತ್ರ್ಯವನ್ನು ಅಪಾಯಕ್ಕೊಡ್ಡಲು ನಾವು ಸಾಮ್ರಾಜ್ಯವಾದಿಗಳಿಗೆ ಅವಕಾಶ ಮಾಡಿಕೊಡುವದಿಲ್ಲವೆಂದು ನಾವು ದೃಢ ಪ್ರತಿಜ್ಞೆ ಮಾಡೋಣ.

[ಮುಗಿಯಿತು]

ಒಂದು ವರದಿ

ಇವರೂ ಸ್ವತಂತ್ರ ಭಾರತದ ಪ್ರಜೆಗಳು !

[ವಿಟ್ಟಿಮಲ್ಕಾಪೂರ ರಾಯಚೂರು ಜಿಲ್ಲೆಯ ಒಂದು ಪುಟ್ಟ ಗ್ರಾಮ. ಆ ಗ್ರಾಮದಲ್ಲಿ 1975-76ರಲ್ಲಿ ಬೃಂದಾವನ್ ಕ್ವಾರ್ಟ್ಜ್ ಇಂಡಸ್ಟ್ರೀಜ್ ಎಂಬ ಚಿಕ್ಕ ಕಾರ್ಖಾನೆ ಪ್ರಾರಂಭಿಸಲಾಗಿತ್ತು. ಒಟ್ಟು 60 ಜನರು ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಯಾವದೇ ಪ್ರಾಥಮಿಕ ಸೌಲಭ್ಯಗಳಿಲ್ಲದೇ ದುಡಿಯುತ್ತಿರುವ ಈ ಬಡಪಾಯಿಗಳು ವಿಚಿತ್ರ ರೋಗದಿಂದ ಬಳಲಿ ದಿನೇ ದಿನೇ ಒಬ್ಬೊಬ್ಬರಾಗಿ ಸಾವನ್ನಪ್ಪುತ್ತಿದ್ದಾರೆ. ಈ ಬಡಪಾಯಿಗಳ ಅಳಲನ್ನು ಅರಿಯಲು ರಾಯಚೂರಿನಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಆ ಗ್ರಾಮಕ್ಕೆ ತೆರಳಿದ್ದರು. ಈ ಲೇಖನವನ್ನು ವಿಟ್ಟಿಮಲ್ಕಾಪೂರಕ್ಕೆ ತೆರಳಿದವರಲ್ಲಿ ಒಬ್ಬರಾದ ಕಾಂ. ಗಂಗಾಧರ ಕುಷ್ಟಗಿಯವರು ಬರೆದಿದ್ದಾರೆ.]

ರಾಯಚೂರು ನಗರದಿಂದ ಸುಮಾರು 8 ಕಿ.ಮಿ. ದೂರದ ಕುಗ್ರಾಮ 'ವಿಟ್ಟಿಮಲ್ಕಾಪೂರ'ಕ್ಕೆ ಭೇಟಿಕೊಡಲು ನಿಶ್ಚಯಿಸಿದ್ದು, ಅಲ್ಲಿ ಸತತವಾಗಿ ಕಾರ್ಮಿಕರನ್ನು ಶೋಷಕನೊಬ್ಬ ಬಲಿತೆಗೆದುಕೊಳ್ಳುತ್ತಿರುವ ವಿಷಯ ತಿಳಿದ ನಂತರವೇ. ಬಸ್ಸನ್ನು ವಿಚಾರಿಸಲಾಗಿ ಆ ಗಾಮದ ಅಡ್ಡ ರಸ್ತೆಗೆ ಬಸ್‌ಗಳು ನಿಲ್ಲುವ ನಿಯಮವಿಲ್ಲವೆಂದು ತಿಳಿಯಿತು. ಅನಿವಾರ್ಯವಾಗಿ ಸೈಕಲ್ ಮೇಲೆಯೇ ಪ್ರಯಾಣ ಮಾಡಬೇಕಾಯಿತು. ನಾನು ಮತ್ತು ಇನ್ನೋರ್ವ ಸಂಗಾತಿ ಪುರುಷೋತ್ತಮ್ ಇಬ್ಬರೂ ಸುಮಾರು ಮಧ್ಯಾಹ್ನ 4 ಘಂಟೆಗೆ ಹೊರಟು 5ಘಂಟೆಯ ಹೊತ್ತಿಗೆ ಆ ಸ್ಥಳ ತಲುಪಿದೆವು.

ಹೋಗುವಾಗ ದಾರಿಯಲ್ಲಿ ಅದೇ ಗ್ರಾಮವಾಸಿಗಳಿಬ್ಬರ ಪರಿಚಯವಾಯಿತು. ಹೀಗಾಗಿ ಊರಿನ ವಾತಾವರಣ ತಿಳಿಯಲು ಮತ್ತು ಕಾರ್ಮಿಕರ ಪರಿಚಯ ಮಾಡಿಕೊಳ್ಳಲು ಕಷ್ಟವಾಗಲಿಲ್ಲ. ಪರಿಚಿತರು, ಸುಮಾರು 20ಜನರನ್ನು ಕರೆತಂದು ಭೇಟಿಮಾಡಿಸಿದರು. ಬಂದವರೆಲ್ಲ ಹೆಂಡತಿಯನ್ನೋ, ತಂಗಿಯನ್ನೋ, ಗಂಡನನ್ನೋ, ಅಣ್ಣ-ತಮ್ಮಂದಿರನ್ನೋ ಕಳೆದುಕೊಂಡವರೇ ಆಗಿದ್ದರು. ಪಾಪ ಅವರೆಲ್ಲರಿಗೆ ನಗರದಿಂದ ಬಂದವರು ನಾವೆಂದು ತಿಳಿದೊಡನೆ ನಾವು ಕಾರ್ಮಿಕ ಅಧಿಕಾರಿಗಳು (Labour Officer) ಎಂದು ತಿಳಿದುಕೊಂಡರು.

ರಾಯಚೂರು ನಗರದ ದೊಡ್ಡ ವ್ಯಾಪಾರೀ ಕುಳ. ದಾಸ-ಧರ್ಮಗಳಲ್ಲಿ ಎತ್ತಿದ ಕೈ. (ಮಠ ಮಾನ್ಯಗಳಿಗೆ ಮಾತ್ರ) ಎಂದು ಮುಂತಾಗಿ ಹೆಸರುಳ್ಳ ವ್ಯಕ್ತಿ 'ಶ್ರೀನಿವಾಸಯ್ಯ ಶೆಟ್ಟಿ'. ಆತ, ತಾನು ಕುಳಿತುಕೊಂಡು ತಿಂದ

ಗಂಗಾಧರ್ ಕುಷ್ಟಗಿ

ರೂ ಮುಗಿಯದಷ್ಟಿದ್ದ ಆಸ್ತಿಯನ್ನು ಮಲಗಿ ತಿಂದರೂ ತೀರದಂತೆ ಮಾಡಲೇನೋ ಎನ್ನುವಂತೆ ವಿಟ್ಟಿಮಲ್ಕಾಪೂರದ ಸಮೀಪ 1975-76ರಲ್ಲಿ "ಬೃಂದಾವನ್ ಕ್ವಾರ್ಟ್ಜ್ ಇಂಡಸ್ಟ್ರೀಜ್ (Brindavan Quartz Industries) ಪ್ರಾರಂಭಿಸುವದರೊಂದಿಗೆ ದಲಿತರ ಹೆಣಗಳನ್ನು 'ಬೃಂದಾವನ'ಕ್ಕೆ ಹಾಕತೊಡಗಿದೆ. ಅದೊಂದು ಸಣ್ಣ ಕಾರ್ಖಾನೆ. ಸಿಲಿಕೋ ಕಲ್ಲುಗಳನ್ನು ಚೂರು ಮಾಡುವ ಕೆಲಸ ಇಲ್ಲಿ ನಡೆಯುವುದು; ಈ ಸಿಲಿಕೋ ಕಲ್ಲುಗಳ ಚೂರು ಮತ್ತು ಹುಡಿ (Powder) ಗಳು ಬಂಗ್ಲೆ (Buildings) ಗಳ ಉಪಯೋಗಕ್ಕೆ ಬರುವ ಪ್ಲೇಟುಗಳನ್ನು ತಯಾರಿಸಲು ಉಪಯೋಗವಾಗುತ್ತವೆ. ಹಗಲು (Day Shift) ಮತ್ತು ರಾತ್ರಿ (Night Shift) ಸೇರಿ ಒಟ್ಟು 60ಜನ ಕೆಲಸ ಮಾಡುತ್ತಾರೆ.

ವರ್ಷದಲ್ಲಿ ಸ್ವಲ್ಪ ಸಮಯ ಮಾತ್ರ ಕೂಲಿ ಪಡೆಯುವ ಕೃಷಿಕೂಲಿಕಾರರಿಗೆ ಈ ಕಾರ್ಖಾನೆ ಪ್ರಾರಂಭವಾದುದು ಸಂತೋಷವನ್ನುಂಟುಮಾಡಿತು. ಮಧ್ಯಂತರದಲ್ಲಿ ಕೆಲಸಬಿಡುವುದಿಲ್ಲ ಎಂಬ ಕರಾರು ಪತ್ರಕ್ಕೆ ಕೂಲಿಗಳು ಹೆಬ್ಬೆಟ್ಟು ಒತ್ತಿ ಕೆಲಸಕ್ಕೆ ಹಾಜರಾದರು. ಕೃಷಿ ಕೆಲಸಕ್ಕಿಂತ ಈ ಕಾರ್ಖಾನೆ ಕೆಲಸಕ್ಕೆ ಸ್ವಲ್ಪ ಕೂಲಿ ಹೆಚ್ಚು ಸಿಗುವ (ಕೃಷಿಕೂಲಿ ರೂ. 1.50) ಸಾಧ್ಯತೆಯಿದ್ದುದರಿಂದ ಆ ಬಡಪಾಯಿಗಳು ಸಂತೋಷಪಟ್ಟರು. ಈ ಕೂಲಿಗೆ ಪ್ರತಿಯಾಗಿ ಕಾರ್ಮಿಕರು ಮುಂಜಾನೆಯಿಂದ ಸಾಯಂಕಾಲದವರೆಗೆ ಮೈಮುರಿದು ದುಡಿಯಬೇಕಾಗುತ್ತಿತ್ತು. ಕಲ್ಲು ಒಡೆದು ತರುವದು, ಮಷಿನ್‌ಗೆ ಹಾಕುವುದು, ಶೇಖರಿಸುವದು, ಬೇರ್ಪಡಿಸುವುದು, ಲೋಡ್‌ಮಾಡುವುದು ಹೀಗೆ ಎಲ್ಲವನ್ನು ಮಾಡಬೇಕು. ಕೆಲಸಗಾರರಲ್ಲಿ ಮೂರುನಾಲ್ಕು ಜನ ಬಿಟ್ಟರೆ ಉಳಿದವರೆಲ್ಲ ಮಹಿಳೆಯರು ಮತ್ತು 14 ವಯಸ್ಸಿನೊಳಗಿನ ಮಕ್ಕಳು. ಕಾರ್ಮಿಕರಿಗಿರಬೇಕಾದ ಎಲ್ಲ ಸೌಲಭ್ಯಗಳಿಂದಲೂ ವಂಚಿತರಾದವರು. ಕನಿಷ್ಟ ವೈದ್ಯಕೀಯ ಸೌಲಭ್ಯ ಕೂಡ ಇಲ್ಲ.

ಗ್ರಾಮವಾಸಿಗಳು ಭಯಭೀತರಾದದ್ದು, ಮೂರು ವರ್ಷಗಳ ನಂತರದಲ್ಲಿ ನಾಲ್ಕು ಜನ ಮಹಿಳೆಯರು (ಕಾರ್ಖಾನೆ ಕೆಲಸಗಾರರು) ಒಂದೇ ತಿಂಗಳಿನಲ್ಲಿ ಒಂದೇ ತೆರನಾಗಿ ನರಳಿ ಸತ್ತಾಗ. ಉಳಿದವರೆಲ್ಲ ಕೆಲಸಕ್ಕೆ ಹೋಗುವದನ್ನು ನಿಲ್ಲಿಸಿದರು. ಕಾರ್ಖಾನೆ ಮಾಲೀಕ ಶ್ರೀನಿವಾಸಯ್ಯಶೆಟ್ಟಿ ಕೂಡಲೇ ಧಾವಿಸಿ ಬಂದು, 'ನೀವೇನೂ ಅಂಜಬೇಕಿಲ್ಲ!, ಅವರ ಸಾವಿಗೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವದಕ್ಕೂ ಏನೂ ಸಂಬಂಧವಿಲ್ಲ. ಸತ್ತವರು ಬೇರೆಯಾವುದೋ ರೋಗಕ್ಕೆ ತುತ್ತಾಗಿದ್ದಾರೆ. ನೀವೆಲ್ಲ ಕೆಲಸಕ್ಕೆ ಹಾಜರಾಗಿ ಎಂದು 'ಅಪ್ಪಣೆ'ಕೊಡಿಸಿ, ಮೊದಲಿದ್ದ ಕೂಲಿಗೆ ಇನ್ನೊಂದು ರೂಪಾಯಿ ಹೆಚ್ಚಿಸಿ (ರೂ. 3-50) ದನು. ನಿರಕ್ಷರತೆ ಹಾಗೂ ಮೌಢ್ಯತೆ ಎಲ್ಲಕ್ಕೂ ಹೆಚ್ಚಾಗಿ 'ಹೊಟ್ಟೆಯ ಸಮಸ್ಯೆ'ಗಳಿಂದಾಗಿ ಮತ್ತೆ ಕೆಲಸಗಾರರು ಕೆಲಸಕ್ಕೆ ಹಾಜರಾದರು. ನಿತ್ರಾಣರಾದ ಕೆಲವರು ಮಾತ್ರ ಕೆಲಸ ಬಿಟ್ಟರು. ಈಗ ಕೆಲಸಗಾರರ ಸಂಖ್ಯೆ 25ಕ್ಕೆ ಇಳಿದಿತ್ತು.

ಸತ್ತವರ ಸಂಬಂಧಿಕರು ನಗರದ ಕಾರ್ಮಿಕ ಅಧಿಕಾರಿಗಳಿಗೆ ದೂರು ಕೊಟ್ಟರೂ, ಶೆಟ್ಟರ ಪ್ರಭಾವದಿಂದಾಗಿ ಏನೂ ಉಪಯೋಗವಾಗಲಿಲ್ಲ. ಮತ್ತೊಂದು ವರ್ಷ (1979) ಕಳೆಯುವುದರೊಳಗಾಗಿ ಮತ್ತೆ ಎಂಟು ಜನ ಸತ್ತರು. ಇವರೂ ಮೊದಲಿನವರ ಸ್ಥಿತಿಯಲ್ಲೇ ನರಳಿ ಸತ್ತರು.

(7ನೇ ಪುಟ ನೋಡಿ)

ಸಮಾಜವಾದೀ ಪೋಲಂಡಿನ ವಿದ್ಯಮಾನಗಳು

(5ನೇ ಪುಟದಿಂದ)

ಯಬೇಕೆನ್ನುವವರು ನಮ್ಮ ಜನತಾ ಪ್ರಭುತ್ವದ ಅಸ್ತಿತ್ವದ ನೀತಿಗೇ ವಿರುದ್ಧವಾಗಿ ವರ್ತಿಸುವವರು.

ಸಮಾಜವಾದೀ ಪ್ರಭುತ್ವಗಳ ಸಮುದಾಯದ ಅಡಿಗಲ್ಲು ಹಾಕುವುದರಲ್ಲಿ ಪೋಲಂಡ್ ಸಕ್ರಿಯವಾಗಿ ಭಾಗವಹಿಸಿತ್ತು. ಇದರಿಂದ ತನ್ನ ಚರಿತ್ರೆಯಲ್ಲಿ ಪ್ರಥಮ ಬಾರಿಗೆ ಅದು ತನ್ನ ನಾಲ್ಕೂ ಸುತ್ತಲೂ ಮಿತ್ರದೇಶಗಳನ್ನು ಹೊಂದುವಂತಾಗಿ ಯುರೋಪಿನಲ್ಲಿ ಯುದ್ಧದ ತಡೆಗೆ, ಶಾಶ್ವತ ಶಾಂತಿ ಹಾಗೂ ಭದ್ರತೆಗಾಗಿ ಪರಿಣಾಮಕಾರಿ ಹೋರಾಟದ ನಾಂದಿಯಾಯಿತು.

ನಮ್ಮ ದೇಶದೊಳಗಿನ ಸಂಗತಿಗಳನ್ನು ಕುರಿತಂತೆ ಪಾಶ್ಚಿಮಾತ್ಯ ದೇಶಗಳ ನಿಲುವಿನ ಬಗ್ಗೆ ತೀವ್ರವಾಗಿ ಗಮನಿಸುತ್ತಿದ್ದೇವೆ. ಕೆಲವು ದೇಶಗಳು ಸಮಾಜವಾದೀ ಪೋಲಂಡ್ ಮಾತ್ರ ಯುರೋಪಿನ ಸುಭದ್ರತೆಗೆ ಸಹಾಯಕ ಎಂಬ ವಾಸ್ತವತಾವಾದೀ ನಿಲುವು ತಳೆದಿವೆ. ಇನ್ನು ಕೆಲವು ದೇಶಗಳು ಮಾತ್ರ ಯುರೋಪಿನ ಶಕ್ತಿ ಸಮತೋಲನವನ್ನು ಬದಲಿಸಲು ಪೋಲಂಡ್ ಬಿಕ್ಕಟ್ಟನ್ನು ಉಪಯೋಗಿಸಬಯಸುತ್ತಿವೆ. ಇವು ಸಮಾಜವಾದೀ ವಿರೋಧೀ ಶಕ್ತಿಗಳಿಗೆ ಬೆಂಬಲಿಗರಾಗಿ ಬಂಡಮೋಲು ಕೃತ್ಯಗಳ ಪ್ರಚಾರಕರಾಗಿ ವರ್ತಿಸುತ್ತಿದ್ದಾರೆ.

ನಾವು ನಮ್ಮ ಆಂತರಿಕ ವ್ಯವಹಾರಗಳಲ್ಲಿ ಕೈಹಾಕಲು ಸೋವಿಯಟ್ ಸಂಘದೊಡನೆ ಮಿತ್ರತ್ವವನ್ನು ಮುರಿಯಲು ಯಾರಿಗೂ ಅವಕಾಶ ಕೊಡುವುದಿಲ್ಲ. ತಮ್ಮ ಪ್ರಮುಖ ರಾಷ್ಟ್ರೀಯ ಹಿತಾಸಕ್ತಿಗಳ ಬಗ್ಗೆ ತಿರಸ್ಕಾರದ ನಿಲುವು ತಳೆದುದಕ್ಕೆ ಈ ಹಿಂದೆ ಪೋಲಂಡಿನ ಜನತೆ ಭಾರೀ ಬೆಲೆತೆರಬೇಕಾಯಿತು. ಅಂತಹ ತಪ್ಪನ್ನು ಇನ್ನೊಮ್ಮೆ ಮಾಡುತ್ತೇವೆಂದು ಯಾರೂ ಭಾವಿಸದಿರಲಿ.

ನಾವು ಸಮಸ್ತ ದೇಶದೊಡಗೂಡಿ ಈ ತಾತ್ಕಾಲಿಕ ಸಂಕಷ್ಟಗಳಿಂದ ಪಾರಾಗುತ್ತೇವೆ.

o

ಶೈಕ್ಷಣಿಕ ವಿಚಾರ ಸಂಕಿರಣ

ಕರ್ನಾಟಕ ಮಾಧ್ಯಮಿಕ ಶಾಲಾ ನೌಕರರ ಸಂಘ ಮತ್ತು ಸಮಾಜ ವಿಜ್ಞಾನ ವೇದಿಕೆಯವರು ಜೊತೆಯಾಗಿ ಬಿಜಾಪುರದಲ್ಲಿ ಪ್ರಥಮ ಬಾರಿ ವಿದ್ಯಾರ್ಥಿಗಳು-ಪಾಲಕರೆಲ್ಲ ಎದುರಿಸುತ್ತಿರುವ ಅತಿ ಮಹತ್ವದ ಜೀವಂತ ಸಮಸ್ಯೆಯಾದ ಶಿಕ್ಷಣ ಸಂಬಂಧ ವಿಚಾರಸಂಕಿರಣವನ್ನು ಆಗಸ್ಟ 8 ಮತ್ತು 9ರಂದು ಬಿಜಾಪುರದಲ್ಲಿ ಸಂಘಟಿಸಿದ್ದರು.

ವಿದ್ಯಾರ್ಥಿ-ಶಿಕ್ಷಕ ಸಂಬಂಧ, ವೈಜ್ಞಾನಿಕ ಪಠ್ಯಕ್ರಮ, ಶಾಲಾ ನೌಕರರ ಸಂಘಟನಾ ಹಕ್ಕುಗಳು, ಸರಕಾರದ ಶೈಕ್ಷಣಿಕ ಧೋರಣೆ ಈ ವಿಷಯಗಳ ಮೇಲೆ ಎರಡು ದಿವಸ ಗೋಕಾಕದ ಶ್ರೀ ಜಿ. ಕೆ. ಬಡಿಗೇರ, ಶ್ರೀ ಕಿತ್ತೂರ ಬಿಜಾಪುರ, ಶ್ರೀ ಎಸ್. ವಿ. ಥೊಬ್ಬಿ ಗುಲ್ಬರ್ಗಾ, ಕೆ. ವಿ. ರಾಯಚೂರ ಹುಬ್ಬಳ್ಳಿ, ಶ್ರೀ ಬಿ. ವಿ. ಮಠ ಬಿಜಾಪುರ, ವಿ. ಎನ್. ಹಳಕಟ್ಟಿ ಮತ್ತು ರುದ್ರಪ್ಪ ಕಾಯಿ ಧಾರವಾಡ ಇವರು ಭಾಷಣ ಮಾಡಿದರು.

ಶ್ರೀ ಸಹಜಾನಂದ ದಂಧರಗಿ, ಎ. ಎಸ್. ಹಿಪ್ಪರಗಿ, ಶ್ರೀಮತಿ ವಿಜಯಲಕ್ಷ್ಮಿ ಆದ್ಯ ಹಾಗೂ ಎಸ್. ಎಸ್. ಇನಾಮದಾರ ಇವರು ನಾಲ್ಕು ಗೋಷ್ಠಿಗಳ ನಿರ್ವಹಣೆ ಮಾಡಿದರು. ಕಾಯಿಂದೆ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಬಿ. ಜಿ. ಮಹಾಲದಾರರು ವಿಚಾರಗೋಷ್ಠಿಯ ಉದ್ಘಾಟನೆ ಮಾಡುತ್ತ, 33ವರ್ಷದ ಕಾಂಗ್ರೆಸ್ ಆಳ್ವಿಕೆಯಲ್ಲಿ ಶಿಕ್ಷಣ ಪದ್ಧತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲೆಂದೂ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಬರೇ ಘೋಷಣೆಯಾಗಿಯೇ ಉಳಿದಿದೆಂದೂ, ನಿರಕ್ಷರಿಗಳ ಸಂಖ್ಯೆ ದೇಶದಲ್ಲಿ 70%ಕ್ಕೂ ಮೇಲ್ಪಟ್ಟಿದೆಂದೂ, ಕಾರಣ ನಿರಕ್ಷರತೆಯನ್ನೂ, ನಿರುದ್ಯೋಗವನ್ನೂ ಬಗೆಹರಿಸುವಂಥ, ಜನತೆಯಲ್ಲಿ ಪ್ರಜ್ಞೆ ಉಂಟುಮಾಡುವಂಥ ಶಿಕ್ಷಣ ಪದ್ಧತಿ ತರುವುದಗತ್ಯವೆಂದೂ ಹೇಳಿದರು. ವಿಚಾರಸಂಕಿರಣದಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ಆದಿಕಾಲದಿಂದಲೂ ಚಾಲ್ತಿಯೊಳಗಿದ್ದ ಶಿಕ್ಷಣ, ಸಮಾಜ ಪದ್ಧತಿಗಳನ್ನು ವಿಮರ್ಶೆ ಮಾಡಿ, ಜಾತಿ, ಧರ್ಮಗಳಲ್ಲಿ ಜನರನ್ನು ವಿಂಗಡಿಸುವ, ಜನತೆಯ ಹಾಗೂ ರೈತ-ಕಾರ್ಮಿಕರ ಹೋರಾಟಗಳನ್ನೂ ಸಮತಾವಾದ ಸಿದ್ಧಾಂತಗಳನ್ನೂ ಅಳವಡಿಸಿಕೊಳ್ಳದ, ಸಮಾಜದ ನಿಜ ಚಿತ್ರವನ್ನು ಮುಂಡಿಸದ ಶಿಕ್ಷಣ ಪದ್ಧತಿ, ನಮ್ಮ ದೇಶದಲ್ಲಿ ಜಾತಿ, ಧರ್ಮಗಳೊಳಗೆ ಜಗಳ-ಭಿನ್ನಾಭಿಪ್ರಾಯಗಳನ್ನುಂಟುಮಾಡುವ, ಹಳೇ ಪದ್ಧತಿ, ಸಂಸ್ಕೃತಿಗಳನ್ನೇ ಮುಂದುವರಿಸುವ, ಸುಧಾರಣೆಗಳಿಗಾಗಿ ಹೋರಾಡುವ ಪ್ರವೃತ್ತಿಯನ್ನೇ ಅಲ್ಲಗಳೆಯುವ ಶಿಕ್ಷಣ ಪದ್ಧತಿಯಲ್ಲಿ ಮೂಲಭೂತ ಬದಲಾವಣೆಯಾಗುವ ಅಗತ್ಯವನ್ನು ಒತ್ತಿ ಹೇಳಿದರು.

ಬಿಜಾಪುರದಲ್ಲಿ ಪ್ರಥಮವಾಗಿ ಈ ವಿಚಾರಗೋಷ್ಠಿ ನಡೆದಿದ್ದು, ತಾಲೂಕ ಮಟ್ಟದಲ್ಲೂ ಇಂಥ ಗೋಷ್ಠಿಗಳನ್ನು ನಡೆಸುವ ವಿಚಾರ ಇದೆ. ರಾಜ್ಯದ ಇತರ ಕಡೆಗಳಲ್ಲೂ ಇಂಥ ವಿಚಾರಗೋಷ್ಠಿಗಳನ್ನು ನಡೆಸಿ, ವಿದ್ಯಾರ್ಥಿಗಳೂ, ಪಾಲಕರೂ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಿದರೆ ಹೆಚ್ಚಿನ ಪ್ರಜ್ಞೆ ಉಂಟುಮಾಡಬಹುದು.

●

ಸಮ್ಮೇಳನ

ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಮಂಗಳೂರು ತಾಲೂಕು ಸಮಿತಿಯ ಪ್ರಥಮ ಸಮ್ಮೇಳನವು 16-8-81ರಂದು ತೊಕ್ಕೋಟಿನಲ್ಲಿ ನಡೆಯಿತು. ಯು. ಬಿ. ನಾರಾಯಣರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ರಮೇಶ್ ಉಲ್ಲಾಳರು ಪ್ರತಿನಿಧಿಗಳನ್ನು ಸ್ವಾಗತಿಸಿದ ಬಳಿಕ ತಾಲೂಕು ಸಮಿತಿಯ ಸಂಚಾಲಕ ಕಾಂ. ಬಿ. ಉಮಾನಾಥರು ಮಂಡಿಸಿದ ವರದಿ ಹಾಗೂ ಲೆಕ್ಕಪತ್ರವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಮುಖ್ಯ ಅತಿಥಿಯಾದ ಕಾಂ. ಬಿ. ಮಾಧವರು ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಕುರಿತು ಪ್ರಸ್ತಾಪಿಸುತ್ತಾ ಸಾಮ್ರಾಜ್ಯಶಾಹಿಗಳು ನಡೆಸುವ ಪಿತೂರಿಯನ್ನು ವಿವರಿಸಿ, ಇಂತಹ ಪರಿಸ್ಥಿತಿಯಲ್ಲಿ ಯುವಜನರಿಗೆ ಸರಿಯಾದ ತಿಳುವಳಿಕೆ ಕೊಟ್ಟು, ಅವರನ್ನು ಸಂಘಟಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಯುವಜನ ಸಂಘಟನೆಯ ಜಿಲ್ಲಾ ಸಮಿತಿ ಸದಸ್ಯ ಕಾಂ. ಶಂಕರ್‌ರವರು ಮಾತನಾಡುತ್ತಾ, ಯುವಜನ ಸಂಘಟನೆಯ ಮಹತ್ವವನ್ನು ವಿವರಿಸಿದರು.

ನಂತರ ಮಂಗಳೂರು ತಾಲ್ಲೂಕು ಸಮಿತಿಗೆ ರಮೇಶ್ ಉಲ್ಲಾಳರು ಅಧ್ಯಕ್ಷರಾಗಿ, ಯು. ಬಿ. ನಾರಾಯಣರು ಉಪಾಧ್ಯಕ್ಷರಾಗಿ, ಭುಜಂಗಮಾರ್ಲರು ಪ್ರಧಾನಕಾರ್ಯದರ್ಶಿ, ಕೃಷ್ಣಪ್ಪ ಮತ್ತು ಆನಂದ ಉಲ್ಲಾಳರು ಖಜಾಂಚಿಯಾಗಿರುವ 26 ಜನರನ್ನು ಚುನಾಯಿಸಲಾಯಿತು.

○

ಇವರೂ ಸ್ವತಂತ್ರ ಭಾರತದ ಪ್ರಜೆಗಳು!

(6ನೇ ಪುಟದಿಂದ)

ಈಗ ಗ್ರಾಮಸ್ಥರಿಗೆ ಏನು ಮಾಡಬೇಕೋ ತೋಚದಾಯಿತು. ಸರಕಾರೀ ಡಾಕ್ಟರರಂತೂ ಕೆಲ ಮಾತ್ರೆಗಳನ್ನು ಕೊಡುವುದರ ವಿನಾಃ ಏನೂ ಮಾಡಲಿಲ್ಲ. ಕೆಲವು ರೋಗಿಗಳನ್ನು ಹೈದರಾಬಾದ್, ಗುಲಬರ್ಗಾ ಮತ್ತು ರಾಯಚೂರಿನ ಖಾಸಗೀ ಆಸ್ಪತ್ರೆಗಳಿಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದರು. ಇಷ್ಟೆಲ್ಲ ಅನಾಹುತ ನಡೆದಾಗಲೂ ತನಗೆ ಸಂಬಂಧಿಸಿಯೇ ಇಲ್ಲದ ವಿಶಂತಿದ್ದ ಶೆಟ್ಟಿ!

ಖಾಸಗೀ ಡಾಕ್ಟರುಗಳ ಹತ್ತಿರ ತೋರಿಸಲು ಸಾವಿರಾರು ರೂಪಾಯಿಗಳನ್ನು ಕಳೆದುಕೊಂಡಾಗ್ಯೂ ಈ ಒಂದು ವರ್ಷದಲ್ಲಿ ಮತ್ತೆ ಆರುಜನ ಕಾರ್ಮಿಕರು ಸತ್ತಿದ್ದಾರೆ. ಕೆಲವೈದ್ಯರು ಈ ರೋಗಕ್ಕೆ ಟಿ. ಬಿ. ಎಂದು ಹೇಳಿದರೆ ಇನ್ನು ಕೆಲವರು ಸಿಲಿಕೋಸಿಸ್ (Silicosis) ಎಂದು ಹೇಳಿದ್ದಾರೆ. ಈ ರೋಗ ಗಣಿ ಕಾರ್ಮಿಕರಲ್ಲಿ ಸಾಮಾನ್ಯ. ಸಿಲಿಕಾ ಕಲ್ಲಿನ ಹುಡಿಯು ಉಸಿರಾಟದ ಕಾಲಕ್ಕೆ ಪುಪ್ಪುಸ ಸೇರಿ ಅಲ್ಲಿ ಸಣ್ಣ ಸಣ್ಣ ರಂದ್ರಗಳನ್ನು ಮಾಡುತ್ತದೆ. ಇದರಿಂದ ಉಬ್ಬುಸ, ದಮ್ಮು, ಜ್ವರ, ನರಗಳ ನಿಶ್ಶಕ್ತಿ ಕೊನೆಗೆ ಕೈಕಾಲಾಡಿಸಲೂ ಶಕ್ತಿ ಇಲ್ಲದಂತಾಗಿ ಸಾಯುವದು ಈ ರೋಗದ ಸಾಮಾನ್ಯ ಲಕ್ಷಣವೆಂದು ಡಾಕ್ಟರರ ಅಭಿಪ್ರಾಯ.

ಇಂದಿನವರೆಗೆ ಶ್ರೀನಿವಾಸಯ್ಯ ಶೆಟ್ಟಿ ಸುಮಾರು 18ಜನರನ್ನು ಬಲಿ ತೆಗೆದುಕೊಂಡಿದ್ದಾನೆ. 9 ಜನರನ್ನು ಸಾಯುವ ಸ್ಥಿತಿಯಲ್ಲಿಟ್ಟಿದ್ದಾನೆ. ಮತ್ತು ಪೂರ್ಣವಾಗಿ ಮೂರು ಕುಟುಂಬಗಳನ್ನು ಅನಾಥ ಮಾಡಿ, ಮಕ್ಕಳು ತಂದೆ-ತಾಯಿಗಳಿಲ್ಲದೇ ಮನೆ ಮನೆ ತಿರುಗಿ ತಿರುಪೆ ಎತ್ತುವ ಸ್ಥಿತಿಗೆ ಕಾರಣನಾಗಿದ್ದಾನೆ.

ನಗರದಿಂದ ಬಂದು ಇಷ್ಟೆಲ್ಲ ವಿಚಾರಿಸುವ ಇವರು ಸರ್ಕಾರದ ಕಡೆಯವರೇ ಇರಬೇಕೆಂದು ತರ್ಕ ಆ ಮುಗ್ಧ ಜನರದು! ಹಣದ ಸಹಾಯವೋ-ವೈದ್ಯಕೀಯ ಸಹಾಯವೋ ದೊರೆಯಬಹುದೆಂಬ ಕಾತುರ! ತಮ್ಮ ಹೀನ ಸ್ಥಿತಿಯನ್ನು ಇನ್ನಷ್ಟು ಮನದಟ್ಟು ಮಾಡಿಕೊಡಬೇಕೆಂಬ ಉದ್ದೇಶದಿಂದ ಸಾಯುವ ಸ್ಥಿತಿಯಲ್ಲಿರುವ ಕಾರ್ಮಿಕರ ಮನೆಗಳಿಗೆ ಭೇಟಿ ಮಾಡಿಸಲು ನಮ್ಮನ್ನು ಕರೆದೊಯ್ದರು. ಈ ಮನೆಗಳಲ್ಲಿ ನಾವು ಕಂಡದ್ದು ಮೂಳೆಯ ಹಂದರುಗಳನ್ನು. ನಿಸ್ತೇಜಕಣ್ಣುಗಳು, ಗೂಡಿಟ್ಟ ಎದೆ, ಕಡ್ಡಿಯಂತಹ ಕೈ-ಕಾಲುಗಳು, ನಡುಗುವ ಕೈಗೆ ಆಧಾರವಾಗಿರುವ ಕೋಲು. ಅಸ್ಥಿರ ಹೆಜ್ಜೆಗಳ ರೋಗಿಗಳನ್ನು ನಾವು ಆ ಮನೆಗಳಲ್ಲಿ ಕಂಡೆವು. ಎಷ್ಟು ಶೋಧಿಸಿದರೂ ಜೀವಂತ ಕಳೆ ಈ ಬಡಪಾಯಿಗಳಲ್ಲಿ ಕಂಡುಬರಲಿಲ್ಲ.

ವ್ಯಕ್ತಗೊಳಿಸಲಾಗದ ಸಂಕಟ-ಬೇಸರ-ಖೇದಗಳಿಂದ ತಲೆಸುತ್ತುವಂತಾಗಿ ಅಲ್ಲಿ ನಿಲ್ಲಲಾಗಲಿಲ್ಲ. ಮತ್ತೆ ಬರುವದಾಗಿ ಹಳ್ಳಿಗರಿಗೆ ಹೇಳಿ ರಾಯಚೂರಿಗೆ ವಾಪಸ್ಸಾದೆವು. ತಲೆಯಲ್ಲಿ ಯೋಚನೆಗಳು ಸಾಲುಗಟ್ಟಿದ್ದವು.

[ಮಿಟ್ಟಿಮಲ್ಕಾಪೂರದ ಹಳ್ಳಿಗರ ದಾರುಣಾವಸ್ಥೆಯ ನಿವಾರಣೆಗಾಗಿ ಶ್ರೀನಿವಾಸಯ್ಯ ಶೆಟ್ಟಿಯ ಕ್ರೂರ ಶೋಷಣೆಯನ್ನು ತಡೆಗಟ್ಟಲು ರಾಯಚೂರಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಶೀಘ್ರದಲ್ಲಿಯೇ ಹೋರಾಟ ಹೂಡುವ ಹವಣಿಕೆಯಲ್ಲಿದ್ದಾರೆ. ನಂತರದ ಬೆಳವಣಿಗೆಗಳನ್ನು ಮುಂದೆ ಪ್ರಕಟಿಸಲಾಗುವುದು] ●

ಸರ್ವಸದಸ್ಯರ ಸಭೆ

ಕೋಲಾರ ಜಿಲ್ಲಾ ಮೋಟಾರ್ ಲಾರಿ ವರ್ಕರ್ಸ್ ಯೂನಿಯನ್‌ನ ಸರ್ವಸದಸ್ಯರ ಸಭೆಯು ಕೋಲಾರದಲ್ಲಿ 19-8-81ರಂದು ನಡೆಯಿತು. ಸಭೆಯಲ್ಲಿ 1000ಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕಾಂ. ಆರ್. ವೆಂಕಟರಾಮಯ್ಯನವರು ವಹಿಸಿದ್ದರು.

ಚಿಕ್ಕಬಳ್ಳಾಪುರದ ಪೋಲೀಸ್ ಡೆಪ್ಯೂಟಿ ಸೂಪರಿಂಟೆಂಡೆಂಟರು ಬಾಬು ಎಂಬ ಡ್ರೈವರನನ್ನು ಹೊಡೆದು ದೌರ್ಜನ್ಯವೆಸಗಿದ್ದನ್ನು ಖಂಡಿಸಿ, ಕೂಡಲೇ ಸೂಕ್ತಕ್ರಮಕೈಕೊಳ್ಳದಿದ್ದಲ್ಲಿ ಉಗ್ರಕ್ರಮ ಕೈಗೊಳ್ಳಬೇಕಾದೀತೆಂದು ಎಚ್ಚರಿಸಲಾಯಿತು.

ಜಿಲ್ಲೆಯ ಮೋಟಾರ್ ವರ್ಕರ್ಸ್‌ಗೆ ಕನಿಷ್ಟ ವೇತನ, ಪಿ.ಎಫ್. ಸೌಲಭ್ಯ, ಸರ್ವೀಸ್ ಗ್ರಾಚ್ಯುಟಿ ಮುಂತಾದ ಸೌಲಭ್ಯಗಳನ್ನು ದೊರಕಿಸಿಕೊಡುವಂತೆ ಸರಕಾರಕ್ಕೆ ಒತ್ತಾಯಿಸಲಾಯಿತು.

ಸಭೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಸಂಘದ ಅನ್ವರ್, ಎಸ್. ಆದಿಲ್, ನವಾಬ್, ಮುಸ್ತಾಖ್, ಅಹಮ್ಮದ್ ಪ್ಯಾರೇಜಾನ್, ಅಬ್ದುಲ್ ಮಜೀದ್, ಚಲಪತಿ, ನಾರಾಯಣರಾವ್ ಮೊದಲಾದವರು ಮಾತನಾಡಿದರು. ಸಭೆಯಲ್ಲಿ ಯೂನಿಯನ್‌ಗೆ ಈ ಕೆಳಕಂಡ ನೂತನ ಅಧಿಕಾರಿವರ್ಗವನ್ನು ಚುನಾಯಿಸಲಾಯಿತು.

ಆರ್. ವೆಂಕಟ್ರಾಮಯ್ಯ ಅಧ್ಯಕ್ಷರಾಗಿ, ಪ್ಯಾರೇಜಾನ್ ಮತ್ತು ಜಿ. ನಾರಾಯಣರಾವ್ ಉಪಾಧ್ಯಕ್ಷರುಗಳಾಗಿ, ಅಬ್ದುಲ್ ಮಜೀದ್ ಮತ್ತು ಮುಸ್ತಾಖ್ ಮಹಮ್ಮದ್ ಕಾರ್ಯದರ್ಶಿಗಳಾಗಿ, ಜಂಟಿ ಕಾರ್ಯದರ್ಶಿಯಾಗಿ ಗಿರಿ, ಖಜಾಂಚಿಯಾಗಿ ಸೈಯ್ಯದ್ ಆದಿಲ್ ಸಾಬ್.

○

ಡಿ.ವೈ.ಎಫ್.ಐ. ಸಭೆ

13-8-81ರಂದು ರಾಯಚೂರಿನ ಡಿ. ವೈ. ಎಫ್. ಐ. ಶಾಖೆಯ ಸರ್ವಸದಸ್ಯರ ಸಭೆ ಸೇರಿತ್ತು. ಸಭೆಗೆ ಕಾಂ. ಜಿ. ವಿ. ಶ್ರೀರಾಮರೆಡ್ಡಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಜಿಲ್ಲಾ ಸಂಚಾಲಕ ಕಾಂ. ಗಂಗಾಧರರು ಅಧ್ಯಕ್ಷತೆ ವಹಿಸಿದ್ದರು.

ಕಾಂ. ರೆಡ್ಡಿಯವರು 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯುವಜನತೆಯ ಪಾತ್ರ' ಈ ವಿಷಯ ಕುರಿತು ಮಾತನಾಡಿದರು. ಕೊನೆಯಲ್ಲಿ ಸದಸ್ಯರ ಕೋರಿಕೆಯ ಮೇರೆಗೆ ತಮ್ಮ ಇತ್ತೀಚಿನ ರಷ್ಯಾ ಪ್ರವಾಸ ಕುರಿತು ಅನುಭವಗಳನ್ನು ಹೇಳಿದರು.

●

ರೈತಸಂಘದ ಸಭೆ

9-8-81ರಂದು ದ.ಕ. ಜಿಲ್ಲೆಯ ಪುತ್ತೂರು ತಾಲ್ಲೂಕು ರೈತಸಂಘದ ಸಭೆಯು ನಡೆಯಿತು. ಅಧ್ಯಕ್ಷತೆಯನ್ನು ಕಾಂ. ವಿಷ್ಣುಮೂರ್ತಿಯವರು ವಹಿಸಿದ್ದರು. ಆರಂಭದಲ್ಲಿ ರೈತಸಂಘದ ಕಾರ್ಯದರ್ಶಿ ಲಕ್ಷ್ಮಣಗೌಡರು ಸ್ವಾಗತಿಸಿ, ಚಟುವಟಿಕೆಯ ವರದಿ ನೀಡಿದರು.

ನಂತರ ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪುತ್ತೂರು ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಕಾಂ. ಬಿ. ರಾಮಕೃಷ್ಣ ಮತ್ತು ಕಾಂ. ತುಂಬನ್ ಮಾತನಾಡಿದರು. ಸಭೆಯು ಈ ಕೆಳಗಿನವರನ್ನು ರೈತಸಂಘದ ಅಧಿಕಾರಿ ವರ್ಗಕ್ಕೆ ಚುನಾಯಿಸಿತು.

ಅಧ್ಯಕ್ಷರಾಗಿ ಕಾಂ. ತುಂಬನ್, ಉಪಾಧ್ಯಕ್ಷರಾಗಿ ಬಾಬುಗೌಡ, ಕಾರ್ಯದರ್ಶಿಯಾಗಿ ಲಕ್ಷ್ಮಣಗೌಡ, ಸಹಕಾರ್ಯದರ್ಶಿಯಾಗಿ ವಿಲ್‌ಫ್ರೆಡ್, ಕೋಶಾಧಿಕಾರಿಯಾಗಿ ಬಿ. ರಾಮಕೃಷ್ಣ ಇವರುಗಳುಳ್ಳ 20 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ○

ವಿಚಾರಸಂಕಿರಣ

11-8-81ರಂದು ತುಮಕೂರಿನಲ್ಲಿ ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ.ಗಳ ಸಂಯುಕ್ತ ಆಶ್ರಯದಲ್ಲಿ 'ಶಿಕ್ಷಣ ಕ್ಷೇತ್ರದಲ್ಲಿ ಕ್ಯಾಪಿಟೇಶನ್ ಫೀ ಮತ್ತಿತರ ಸಮಸ್ಯೆಗಳು' ಈ ವಿಷಯದ ಕುರಿತು ವಿಚಾರಸಂಕಿರಣ ಏರ್ಪಡಿಸಲಾಗಿತ್ತು. ತುಮಕೂರಿನ ಪುರಭವನದಲ್ಲಿ ನಡೆದ ಈ ವಿಚಾರಸಂಕಿರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಸಹ ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರಿನ ನ್ಯಾಷನಲ್ ಕಾಲೇಜಿನ ಪ್ರಾಧ್ಯಾಪಕರಾದ ಡಾ|| ಜಿ. ರಾಮಕೃಷ್ಣ ವಹಿಸಿದ್ದರು.

ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯ ಸಂಚಾಲಕ ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸ್ಟೇಟ್ ಸ್ಕೂಲ್ ಎಂಪ್ಲಾಯೀಸ್ ಫೆಡರೇಷನ್ನಿನ ಅಧ್ಯಕ್ಷರಾದ ಕೆ. ವಿ. ರಾಯಚೂರ, ಎಸ್. ಎಫ್. ಐ.ನ ಉಪಾಧ್ಯಕ್ಷ ರುದ್ರಪ್ಪಕಾಯಿ ಮತ್ತು ಅವರ ಸಂದೇಶ ಪತ್ರಿಕೆಯ ಸಂಪಾದಕರಾದ ಟಿ. ಜಿ. ಅಡವೀಶಪ್ಪನವರು ಉಪನ್ಯಾಸ ಮಾಡಿದರು. ●

ಸಂಸದೀಯ ಪ್ರಜಾಪ್ರಭುತ್ವವೇ ಗಂಡಾಂತರದಲ್ಲಿದೆ!

[ಆಗಸ್ಟ್ 15ರಂದು ದಾಂಡೇಲಿಯ ಪುರಸಭಾಧ್ಯಕ್ಷ ಕಾಂ. ಆರ್. ಜಿ. ಸ್ಥಳೇಕರರು ದಾಂಡೇಲಿಯ ನಾಗರಿಕರನ್ನು ಉದ್ದೇಶಿಸಿ ಭಾಷಣ ಮಾಡಿದರು. ಕಾಂ. ಸ್ಥಳೇಕರರ ಭಾಷಣದ ಸಾರಾಂಶವಿಲ್ಲಿದೆ]

"ಸ್ವಾತಂತ್ರ್ಯ ದಿನಾಚರಣೆಯ ಈ ಶುಭ ಸಂದರ್ಭದಲ್ಲಿ ತಮ್ಮೆಲ್ಲರನ್ನು ಸ್ವಾಗತಿಸಲು ಸಂತೋಷವಾಗುತ್ತಿದೆ. ರಾಷ್ಟ್ರದಲ್ಲಿ ಆಳವಾಗಿ ಬೆಳೆಯುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಮಧ್ಯದಲ್ಲಿ ನಾವು ಈ ಸಮಾರಂಭವನ್ನು ಆಚರಿಸುತ್ತಿದ್ದೇವೆ. ನಮ್ಮ ದೇಶದ ಆರ್ಥಿಕ ಸ್ಥಿತಿ ದಿನೇದಿನೇ ಹದಗೆಡುತ್ತಿದ್ದು ತತ್ಪರಿಣಾಮವಾಗಿ ಅತಿಪ್ರಸರಣ, ಬೆಲೆ ಏರಿಕೆ ಮತ್ತು ನಿರುದ್ಯೋಗದಂಥ ಸಮಸ್ಯೆಗಳು ಭೂತಾಕಾರವಾಗಿ ಕಾಡುತ್ತಿವೆ. ಇದೆಲ್ಲವನ್ನು ಮರೆಮಾಚಿ 'ಎಲ್ಲವೂ ಸುಗಮವಾಗಿ ಸಾಗಿದೆ' ಎಂಬ ತಪ್ಪು ಕಲ್ಪನೆಯನ್ನು ನೀಡಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಆಳುವ ವರ್ಗಗಳು ಪ್ರಯತ್ನಿಸುತ್ತಿವೆ. ಜನಸಾಮಾನ್ಯರಿಗೆ ದೇಶದ ವಾಸ್ತವ ಪರಿಸ್ಥಿತಿಯ ಅರಿವು ಮೂಡುತ್ತಿಲ್ಲ. ತಮ್ಮ ಪಕ್ಷ ಮತ್ತು ವರ್ಗ ಹಿತದ ಸಂಕುಚಿತ ದೃಷ್ಟಿಯಿಂದ ಈ ರೀತಿ ಜನಸಾಮಾನ್ಯರನ್ನು ವಂಚಿಸಿ ಕತ್ತಲೆಯಲ್ಲಿಡುವುದು ಅಕ್ಷಮ್ಯ ಅಪರಾಧವೂ, ದೇಶದ್ರೋಹವೂ ಆಗಿದೆ. ಬೆಲೆ ಏರಿಕೆ, ನಿರುದ್ಯೋಗದಂಥ ಸಮಸ್ಯೆಗಳಿಂದ ಬಳಲುತ್ತಿರುವ ಜನತೆ ದೇಶದ ಬೆಳವಣಿಗೆಯಲ್ಲಿ ಸಕ್ರಿಯರಾಗಿ ಮುಂದಾಗುವರೆಂಬುದು ಕೇವಲ ಭ್ರಮೆ".

"ಸ್ವಾತಂತ್ರ್ಯ ನಂತರ ನಮ್ಮ ದೇಶದಲ್ಲಿ ಬಂಡವಾಳಶಾಹಿ ಬೆಳವಣಿಗೆ ಭರದಿಂದ ಸಾಗಿದೆ. ಕೆಲವೇ ಜನರ ಹಿಡಿಮುಷ್ಟಿಯಲ್ಲಿ ದೇಶದ ಸಂಪತ್ತು ಕೇಂದ್ರೀಕೃತವಾಗಿದೆ. ಶೇ. 60ರಷ್ಟು ಜನರು ತೀರ ನಿರ್ಗತಿಕರಾಗಿ ಊಟಕ್ಕೂ ಕಂಗಾಲಾಗಿದ್ದಾರೆ. ಇದು ನಮ್ಮ ಸರಕಾರ ಅನುಸರಿಸಿದ ದಿವಾಳಿಖೋರ ಆರ್ಥಿಕ ನೀತಿಯ ಫಲ. ಈ ಬಂಡವಾಳಶಾಹಿ ಪದ್ಧತಿಯಲ್ಲಿ ಜನತೆಯ ಅಗತ್ಯತೆಯನ್ನು ಗಮನದಲ್ಲಿಟ್ಟು ಉತ್ಪಾದನೆಯನ್ನು ಸಾಧಿಸಲಾಗುತ್ತಿಲ್ಲ. ಲಾಭದ ಏಕಮಾತ್ರ ದೃಷ್ಟಿಕೋನದಲ್ಲಿ ಉತ್ಪಾದನಾ ಸಾಧನಗಳನ್ನು ಬಳಸಲಾಗುತ್ತಿದೆ. ಉತ್ಪಾದನಾ ಶಕ್ತಿಗಳು ಮತ್ತು ಉತ್ಪಾದನಾ ಸಾಧನಗಳ ಮಾಲೀಕತ್ವದ ನಡುವಿನ ವೈರುಧ್ಯವು ಆರ್ಥಿಕ ಪರಿಸ್ಥಿತಿಯನ್ನು ಮುಗ್ಗಟ್ಟಿನಲ್ಲಿ ಸಿಲುಕಿಸಿದೆ. ಇದುವೇ ನಮ್ಮನ್ನು ಕಾಡುತ್ತಿರುವ ನಿರುದ್ಯೋಗ, ಬೆಲೆ ಏರಿಕೆ, ಭ್ರಷ್ಟಾಚಾರದಂಥ ಸಮಸ್ಯೆಗಳಿಗೆ ಮೂಲ".

"ಸಮಾಜವಾದದ ಸೋಗಿನಲ್ಲಿ ಮುಂದುವರಿಸಿದ ಈ ಬಂಡವಾಳಶಾಹೀ ಆರ್ಥಿಕ ನೀತಿಯನ್ನು ಸಂಪೂರ್ಣವಾಗಿ ಬಿಟ್ಟುಕೊಡದೇ ಯಾವ ಸಮಸ್ಯೆಗೂ ಪರಿಹಾರ ಕಂಡುಹಿಡಿಯಲು ಸಾಧ್ಯವಿಲ್ಲ. ಇಂದಿರಾಗಾಂಧೀ ಸರಕಾರ ದಿನೇದಿನೇ ಸರ್ವಾಧಿಕಾರದತ್ತ ವಾಲುತ್ತಿದೆ. ಕಾರ್ಮಿಕವರ್ಗದ ಹಕ್ಕನ್ನು ಹತ್ತಿಕ್ಕಲು ಮುಷ್ಕರ ನಿಷೇಧಿಸುವ ಸುಗ್ರೀವಾಜ್ಞೆ ತಂದಿದೆ. ಇದನ್ನು ಗಂಭೀರವಾಗಿ ಗಮನಿಸಿದರೆ ದೇಶದ ಸಂಸದೀಯ ಪ್ರಜಾಪ್ರಭುತ್ವವೇ ಗಂಡಾಂತರದಲ್ಲಿರುವುದು ಕಂಡುಬರುವುದು".

"ಈ ಎಲ್ಲ ವಿದ್ಯಮಾನಗಳನ್ನು ಗಮನಿಸದೇ ಮೈ ಮರೆತರೆ ಪಶ್ಚಾತಾಪಕ್ಕೆ ಗುರಿಯಾಗಬೇಕಾದೀತು!".

●

ಸಂಪಾದಕೀಯ

(1ನೇ ಪುಟದಿಂದ)

ತೆಯಾದ ಕಾರ್ಮಿಕವರ್ಗವನ್ನು ಪ್ರತಿನಿಧಿಸುವ ಕಮ್ಯುನಿಸ್ಟ್ ಪಾರ್ಟಿಯು ಇಂಗ್ಲೆಂಡ್, ಅಮೇರಿಕಾ ಮತ್ತಿತರ ದೇಶಗಳಲ್ಲೂ ಇದೆ; ಭಾರತದಲ್ಲೂ ಇದೆ. ಒಂದು ತತ್ವದ ಆಧಾರದ ಈ ಪಾರ್ಟಿಯು ಹೋರಾಡುತ್ತದೆ.

ಕಾಂಗ್ರೂ ಪಕ್ಷ ಕಳೆದೆರಡು ವರ್ಷಗಳಲ್ಲಿ ಇಂದಿರಾ ಸರ್ವಾಧಿಕಾರದ ವಿರುದ್ಧ ಇತರ ಪಕ್ಷಗಳೊಡನೆ ಸಹಕರಿಸಿ ಹೋರಾಟಮಾಡಿದೆ. ಕೇರಳದಲ್ಲಿ ಅದು ರಾಜ್ಯದ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳೊಂದಿಗೆ ಸೇರಿ ರಂಗ ರಚನೆಮಾಡಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಸರಕಾರದಲ್ಲಿ ಭಾಗಿಯಾಗಿದೆ. ಹಲವು ಹೋರಾಟಗಳಲ್ಲೂ ಅದು ಭಾಗಿಯಾಗಿದೆ. ಆರು ಪಕ್ಷಗಳ ಜಂಟೀ ಸಮಿತಿಯಲ್ಲೂ ಅದು ಸೇರಿದೆ. ಅಧ್ಯಕ್ಷ ಶ್ರೀ ದೇವರಾಜ್ ಅರಸುರವರು ತಮ್ಮ ಸ್ಥಾನಕ್ಕೆ ರಾಜೀನಾಮೆಕೊಟ್ಟು, ಶ್ರೀ ಶರದ್‌ಪವಾರ್‌ರವರು ಈಗ ಅಧ್ಯಕ್ಷರಾದ ಮೇಲೂ ಅದರ ಧೋರಣೆಯಲ್ಲಿ ಮೂಲಭೂತ ಬದಲಾವಣೆ ಕಂಡುಬರುತ್ತಿಲ್ಲ. ತಮ್ಮ ಪಕ್ಷವು ಕೇರಳ ಎಡ ಮತ್ತು ಪ್ರಜಾಪ್ರಭುತ್ವ ಸರಕಾರದಲ್ಲಿ ಮುಂದುವರಿಯುವುದೆಂದೂ, ಬೆಲೆಏರಿಕೆ, ನಿರುದ್ಯೋಗ, ನಾಗರಿಕ ಹಕ್ಕುಗಳು ಮತ್ತು ಪಾರ್ಲಿಮೆಂಟರಿ ಸಂಸ್ಥೆಗಳ ಮೇಲೆ ನಡೆಯುತ್ತಿರುವ ಧಾಳಿ ಮುಂತಾದ ಸಮಸ್ಯೆಗಳಿಗೆ ತಮ್ಮ ಪಕ್ಷವು ಜನತಾ, ಲೋಕದಳ, ಸಿ. ಪಿ. ಐ., ಸಿ. ಪಿ. ಐ. (ಎಂ) ಮೊದಲಾದವರೊಂದಿಗೆ ಸೇರಿ ಹೋರಾಡುವುದೆಂದು ಶ್ರೀ ಪವಾರ್‌ರವರು ತಮ್ಮ ಪತ್ರಿಕಾಗೋಷ್ಠಿಯಲ್ಲಿ ಹೇಳಿರುವುದು ಸ್ವಾಗತಾರ್ಹವಾಗಿದೆ. ಬೆಲೆಏರಿಕೆಯ ವಿರುದ್ಧ ಮುಂತಾದ ಹೋರಾಟಗಳಲ್ಲಿ ಭಾರತೀಯ ಜನತಾಪಕ್ಷದ ಜೊತೆಗೂ ತಾವು ಸೇರಬಹುದೆಂದಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಇತರ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳೊಂದಿಗೆ ಐಕ್ಯರಂಗ ರಚನೆಮಾಡಲು ತಾವು ಇಚ್ಛಿಸುವುದಾಗಿಯೂ ಅವರು ಹೇಳಿದ್ದಾರೆ.

ತಮ್ಮ ಪಕ್ಷವು ಸ್ವತಂತ್ರವಾಗಿ ಉಳಿಯುವುದೆಂದೂ ಮತ್ತು ಆಳುವ ಕಾಂಗ್ರೆಸ್ ಪಕ್ಷದ ವಿರುದ್ಧ ಹೋರಾಡುವುದೆಂದೂ ಹೇಳಿರುವುದು ಸ್ವಾಗತಾರ್ಹವಾಗಿದೆ. ಅದರಲ್ಲೀಗ ಎಷ್ಟು ಲೋಕಸಭಾ ಸದಸ್ಯರು, ಶಾಸನಸಭಾ ಸದಸ್ಯರು ಇದ್ದಾರೆನ್ನುವುದು ಮುಖ್ಯವಲ್ಲ. ಒಂದು ನಿರ್ದಿಷ್ಟ ಪ್ರಜಾಸತ್ತಾತ್ಮಕ ಕಾರ್ಯಕ್ರಮದ ಆಧಾರದಲ್ಲಿ ಇತರ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳೊಂದಿಗೆ ಸೇರಿ, ಜನತೆಯ ಸಮಸ್ಯೆಗಳಿಗೆ ಹೋರಾಟಮಾಡಿದರೆ ಅದು ತನ್ನ ಅಸ್ತಿತ್ವವನ್ನು ಉಳಿಸಬಹುದು ಮತ್ತು ಬೆಳೆಯಲು ಸಾಧ್ಯ. ಪವಾರ್‌ರವರು ಈ ದಿಕ್ಕಿನಲ್ಲಿ ಧೈರ್ಯದಿಂದ ಮುಂದುವರಿಯಲೆಂದು ನಮ್ಮ ಹಾರೈಕೆ. ●

ರಾಜ್ಯಮಟ್ಟದ ಸಮಾವೇಶ

(1ನೇ ಪುಟದಿಂದ)

ಮುಂಬೈ ಸಮಾವೇಶದ ಆದೇಶದಂತೆ ರಾಜ್ಯಮಟ್ಟದಲ್ಲಿ ಪ್ರಬಲ ಕಾರ್ಮಿಕ ಚಳುವಳಿಯನ್ನು ಸಂಘಟಿಸಲು ರಾಜ್ಯಮಟ್ಟದ ರಾಷ್ಟ್ರೀಯ ಚಳುವಳಿ ಸಮಿತಿ (ಎನ್.ಸಿ.ಸಿ.) ಸಿದ್ಧವಾಗಿದೆ. ಸೆಪ್ಟೆಂಬರ್ 6ರಂದು ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ಸಂಘಟಿಸಲಾಗಿದೆ.

ವಿವಿಧ ಕೇಂದ್ರ ಕಾರ್ಮಿಕ ಸಂಘಟನೆ (ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಎಚ್.ಎಂ.ಎಸ್., ಬಿ.ಎಂ.ಎಸ್.)ಗಳು, ಸ್ವತಂತ್ರ ಸಂಘಟನೆಗಳು, ಎಲ್.ಐ.ಸಿ., ಬ್ಯಾಂಕ್ ಮತ್ತು ಕೆ.ಇ.ಬಿ., ಬಿ.ಡಬ್ಲ್ಯೂ.ಎಸ್.ಎಸ್.ಬಿ. ರಾಜ್ಯ ಮತ್ತು ಕೇಂದ್ರ ಸರಕಾರಿ ನೌಕರರ, ಪಿ. ಅಂಡ್ ಟಿ. ಯು ಮತ್ತು ಸಾರಿಗೆ ಸಂಸ್ಥೆಯ ಕಾರ್ಮಿಕರ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕೇಂದ್ರ ಸರಕಾರದ ಜನವಿರೋಧಿ, ಕಾರ್ಮಿಕ ವಿರೋಧಿ ಧೋರಣೆಗಳನ್ನು ಪ್ರತಿಭಟಿಸಿ ನಡೆಯಲಿರುವ ಈ ರಾಜ್ಯಮಟ್ಟದ ಸಮಾವೇಶ ರಾಜ್ಯದ ಕಾರ್ಮಿಕ ಚಳುವಳಿಯಲ್ಲೊಂದು ಮೈಲುಗಲ್ಲಾಗಲಿ. ಪ್ರಬಲ ಚಳುವಳಿ ರೂಪಗೊಳ್ಳಲಿ. ●

ಸಿ. ಪಿ. ಐ. (ಎಂ)ನ ಸಂವಿಧಾನವು ಕನ್ನಡದಲ್ಲಿ ಅಚ್ಚಾಗಿದ್ದು, ಇದನ್ನು ಕ್ರಿಯಾ ಪ್ರಕಾಶನದಿಂದ ನಗದಾಗಿ ಹಣತೆತ್ತು ಪಡೆದುಕೊಳ್ಳಬಹುದು. ಪ್ರತಿ ಒಂದರ ಬೆಲೆ ಒಂದು ರೂಪಾಯಿ. ಪಕ್ಷದ ಎಲ್ಲಾ ಸದಸ್ಯರುಗಳಿಗೂ ಸಂವಿಧಾನದ ಪ್ರತಿ ದೊರೆಯುವಂತೆ ಮಾಡುವುದು ಅವಶ್ಯ. ಸಂಬಂಧಪಟ್ಟ ವ್ಯವಹಾರಗಳನ್ನು ಕ್ರಿಯಾ ಪ್ರಕಾಶನದೊಂದಿಗೆ ನಡೆಸಬೇಕು.

ವಿಳಾಸ :

ಮ್ಯಾನೇಜರ್,

ಕ್ರಿಯಾ ಪ್ರಕಾಶನ (ಪ್ರೈ) ಲಿಮಿಟೆಡ್

ನಂ. 24, ಡಬ್ಲ್ಯೂ. ಎಚ್. ಹನುಮಂತಪ್ಪ ರಸ್ತೆ,
5ನೇ ಮೈನ್, ಗಾಂಧಿನಗರ,
ಬೆಂಗಳೂರು-560009.

ಎಂ. ಕೆ. ಭಟ್
ಸಿ. ಪಿ. ಐ. (ಎಂ) ರಾಜ್ಯ ಕಾರ್ಯದರ್ಶಿ

ಸಿ.ಐ.ಟಿ.ಯು. ರಾಜ್ಯಸಮಿತಿ ಸಭೆ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಎರಡನೆಯ ಸಭೆಯು 5-9-81ರಂದು ಬೆಂಗಳೂರಿನಲ್ಲಿ ನಡೆಯುತ್ತದೆ. ಸಭೆಯು ಬೆಳಿಗ್ಗೆ 11 ಘಂಟೆಗೆ ಪ್ರಾರಂಭವಾಗುತ್ತದೆ.

ರಾಜ್ಯಸಮಿತಿಯ ಸದಸ್ಯರೆಲ್ಲರೂ ತಪ್ಪದೇ ಭಾಗವಹಿಸಬೇಕು. ಮತ್ತು ಬೆಲೆಏರಿಕೆಯ ವಿರುದ್ಧ ಮತ್ತು ಕೇಂದ್ರಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಸೆಪ್ಟೆಂಬರ್ 6ರಂದು ಬೆಂಗಳೂರಿನ ಪುರಭವನದಲ್ಲಿ ನಡೆಯಲಿರುವ ರಾಜ್ಯಮಟ್ಟದ ಕಾರ್ಮಿಕ ಸಮಾವೇಶಕ್ಕೆ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳುವಂತೆ ಪ್ರಯತ್ನಿಸಬೇಕು.

ಸಿ. ನಂಜುಂಡಪ್ಪ
ಪ್ರಧಾನಕಾರ್ಯದರ್ಶಿ
ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT